GOVERNMENT OF TAMIL NADU

# ಮೂರನೇ ತರಗತಿ

## STANDARD THREE

ಅವಧಿ – II

TERM - II

# ಕನ್ನಡ ಕಸ್ತೂರಿ

## KANNADA READER

Department of School Education

Untouchability is inhuman and a crime

Government of Tamil Nadu

First Edition - 2026

(Published under New Syllabus in Trimester Pattern)

**Price: Rs.**

**A call can change your life (24×7 toll free helplines for children below 18 years)**

**If you are forced into Child Marriage or Child Labour, If you are Emotionally, Physically, Sexually Harassed or Abused,**

CHILD LINE 1098 NIGHT & DAY

**If you feel unsafe dial CHILDLINE 1098 Night & Day**

**Caller details will be kept confidential**

**If you are feeling Threatened or being Abused or Harassed - Emotionally, Physically or Sexually, If you are feeling unsafe, If you need guidance for Examinations or Higher Education**

14417 Education Information Centre

**Dial 14417**

**Caller details will be kept confidential**

**Content Creation**

**State Council of Educational Research and Training**

**© SCERT 2026**

**Printing & Publishing**

**Tamil Nadu Textbook and Educational Services Corporation**

# Foreword

The early years of childhood are a time of wonder-when curiosity is boundless, imagination is vivid, and every experience becomes a step in the journey of learning. These textbooks for Classes 1 to 3 have been developed to honour this spirit, creating a learning experience that is joyful, meaningful, and engaging.

Developed as part of the **Tamil Nadu State Education Policy-2025**, these books mark a significant step towards strengthening foundational education in the State. The vision and direction provided by the **Hon'ble Minister for School Education** have ensured that the policy's emphasis on child-centred, competency-based, and inclusive learning is meaningfully reflected in these materials.

The leadership of the **Additional Chief Secretary,** School Education has been instrumental in ensuring the integration of 21st-century skills and knowledge, and in shaping the textbooks into engaging story-driven learning experiences.

This is further reflected in a competency-based approach to curriculum and assessment that moves beyond rote learning to foster deep conceptual understanding and meaningful application. The integration of value education to build character, along with life skills, art and motor skill development, enables the holistic development of the child.

**The members of the High-Level Curriculum Expert Committee, the Chairperson and the members of the Curriculum Development Committee,** have provided constant guidance, shaping and refining these materials through their insights and expertise, alongside the contributions of educators and practitioners acknowledged elsewhere in this book.

At this foundational stage, learning must build strong foundations while supporting the overall development of the child. These textbooks bring together a carefully designed set of features that make learning active, engaging, and meaningful:

- Opportunities for speaking and listening, building confidence in expression
- Activities that strengthen logical thinking and conceptual understanding
- Integrated spaces for reading and writing practice within lessons
- Fine and gross motor skill development through drawing, colouring, tracing, and movement-based tasks
- Simple avenues for independent learning and self-reflection

The books also integrate values and life skills, helping children develop empathy, cooperation, responsibility and confidence.

Learning is guided by a competency-based approach that moves beyond memorisation towards understanding and application. Assessment is embedded within the learning process, making it continuous, meaningful and supportive.

These textbooks are learning companions that invite children to explore, think and express. They represent a shared commitment to enabling every child to learn with joy, grow with confidence, and build a strong foundation for the future-advancing a vision of **"Education reimagined, inclusive, equitable, and future-ready".**

**DIRECTOR**
State Council of Educational
Research and Training (SCERT)
Tamil Nadu

# THE CONSTITUTION OF INDIA

## PREAMBLE

**WE, THE PEOPLE OF INDIA,** having solemnly resolved to constitute India into a **SOVEREIGN SOCIALIST SECULAR DEMOCRATIC REPUBLIC** and to secure to all its citizens:

**JUSTICE**, social, economic and political;

**LIBERTY** of thought, expression, belief, faith and worship;

**EQUALITY** of status and of opportunity;

and to promote among them all

**FRATERNITY** assuring the dignity of the individual and the unity and integrity of the Nation;

**IN OUR CONSTITUENT ASSEMBLY** this twenty-sixth day of November, 1949, do **HEREBY ADOPT, ENACT AND GIVE TO OURSELVES THIS CONSTITUTION.**

# ರಾಷ್ಟ್ರಗೀತೆ

ಜನಗಣಮನ ಅಧಿನಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಪಂಜಾಬ ಸಿಂಧು ಗುಜರಾತ ಮರಾಠಾ ।
ದ್ರಾವಿಡ ಉತ್ಕಲ ವಂಗಾ ।
ವಿಂಧ್ಯ ಹಿಮಾಚಲ ಯಮುನಾ ಗಂಗಾ ॥
ಉಚ್ಛಲ ಜಲಧಿ ತರಂಗಾ ॥
ತವ ಶುಭ ನಾಮೇ ಜಾಗೇ ।
ತವ ಶುಭ ಆಶಿಷ ಮಾಗೇ ॥
ಗಾಹೇ ತವ ಜಯಗಾಥಾ ।
ಜನಗಣ ಮಂಗಳದಾಯಕ ಜಯ ಹೇ ।
ಭಾರತ ಭಾಗ್ಯ ವಿಧಾತಾ ॥
ಜಯ ಹೇ ಜಯ ಹೇ ಜಯ ಹೇ ।
ಜಯ ಜಯ ಜಯ ಜಯ ಹೇ ॥

– ರವೀಂದ್ರನಾಥ ಠಾಗೂರ್

# ರಾಷ್ಟ್ರಗೀತೆಯ ಸಾರ

ಭಾರತ ಮಾತೆಯೇ! ಪ್ರಜೆಗಳ ಸುಖ ದುಃಖಗಳನ್ನು ನಿರ್ಣಯಿಸುವ ನೀನೇ ಎಲ್ಲರ ಮನದಲ್ಲೂ ನೆಲೆಸಿದ್ದೀಯೇ.
ನಿನ್ನ ಶ್ರೀನಾಮ ಪಂಜಾಬ್, ಸಿಂಧು (ಗುಜರಾತ್, ಮಹಾರಾಷ್ಟ್ರ), ದ್ರಾವಿಡ (ಕರ್ನಾಟಕ, ತಮಿಳುನಾಡು,
ಆಂಧ್ರಪ್ರದೇಶ,ತೆಲಂಗಾಣ), ಉತ್ಕಲ(ಒರಿಸ್ಸಾ), ಬಂಗಾಳ ಪ್ರಾಂತ್ಯಗಳನ್ನು ಮನೋದ್ದೀಪನಗೊಳಿಸುತ್ತದೆ.
ಮತ್ತೆ ನಿನ್ನ ಶ್ರೀನಾಮ, ವಿಂಧ್ಯ ಹಿಮಾಚಲ ಪರ್ವತ ಶ್ರೇಣಿಗಳಲ್ಲಿ ಪ್ರತಿಧ್ವನಿಸುತ್ತದೆ. ಯಮುನಾ ಗಂಗಾ ನದಿಗಳ ಮಧುರ
ನಾದದಲ್ಲಿ ಲೀನವಾಗುತ್ತದೆ; ಹಿಂದೂ ಮಹಾಸಾಗರದ ಅಲೆಗಳಲ್ಲಿ ನಮನಗೊಳ್ಳುತ್ತದೆ.
ಅವು ನಿನ್ನ ಕೃಪೆಯನ್ನು ಬೇಡುತ್ತವೆ; ನಿನ್ನ ಕೀರ್ತಿಯನ್ನು ಹರಡುತ್ತವೆ.
ಭಾರತೀಯರಿಗೆ ಮಂಗಳವನ್ನು ನೀಡುವ ತಾಯೇ!
ನಿನಗೆ ಜಯಹೇ! ಜಯಹೇ! ಜಯಹೇ!



# ತಮಿಳು ತಾಯಿ ಪ್ರಾರ್ಥನೆ

ನೀರಾರುಂ ಕಡಲುಡುತ್ತ ನಿಲಮಡಂದೈಕ್ಕೆಳಿಲೊಳುಗುಂ
ಸೀರಾರುಂ ವದನಮೆನತ್ತಿಗಳ್ ಭರತ ಖಂಡಮಿದಿಲ್
ತೆಕ್ಕಣಮುಂ ಅದಿಲ್ ಸಿರಂದ ದ್ರಾವಿಡನಲ್ ತಿರುನಾಡುಂ
ತಕ್ಕಸಿರು ಪಿರೈನುದಲುಂ ತರಿತ್ತನರುಂ ತಿಲಗಮುಮೇ
ಅತ್ತಿಲಗ ವಾಸನೈಪೋಲ್ ಅನೈತ್ತುಲಗುಂ ಇನ್ಬಮುರ
ಎತ್ತಿಸೈಯುಂ ಪುಗಳ್ ಮಣಕ್ಕ ಇರುಂದ ಪೆರುಂ ತಮಿಳಣಂಗೇ!
ತಮಿಳಣಂಗೇ!
ಉನ್ ಸೀರಿಳಮೈತ್ತಿರಂವಿಯಂದು ಸೆಯಲ್ ಮರಂದು ವಾಳ್ತುದುಮೇ!
ವಾಳ್ತುದುಮೇ!
ವಾಳ್ತುದುಮೇ!

ಮನೋನ್ಮಣೀಯಂ ಪಿ.ಸುಂದರನಾರ್



## ತಮಿಳ್ ತಾಯಿಯ ಪ್ರಾರ್ಥನೆಯ ಸಾರ

ಕಡಲುಡುಗೆಯಾದ ಭೂಮಾತೆಯ ಸುಂದರ ವದನದಂತಿರುವ ಭಾರತದ ತೆರೆ ನೊಸಲಿನಂತಿರುವ ದಖ್ಖನದಲ್ಲಿ, ಶ್ರೀಗಂಧದ ತಿಲಕವಿಟ್ಟಂತಿರುವ ನಲ್ನಾಡು ದ್ರಾವಿಡ. ಆ ತಿಲಕದ ಸುಗಂಧದಂತೆ ಸರ್ವ ಲೋಕಕ್ಕೆ ಸಂತೋಷ ವರ್ಧಿಸುತ್ತಿರುವಂತೆ ಎಲ್ಲಾ ದಿಕ್ಕುಗಳಲ್ಲೂ ಕೀರ್ತಿ ಘಮಘಮಿಸುತ್ತಿರುವ ತಮಿಳುತಾಯೇ, ನಿನ್ನ ಗಂಭೀರವಾದ ಚಿರಯೌವ್ವನವನ್ನು ನೆನೆದು ಅಚ್ಚರಿಯಿಂದ ಮೈಮರೆತು ಹಾಡಿ ಹೊಗಳುತ್ತೇನೆ.



## ರಾಷ್ಟ್ರೀಯ ಸಮಗ್ರತೆಯ ಪ್ರತಿಜ್ಞೆ

ರಾಷ್ಟ್ರದ ಸ್ವಾತಂತ್ರ್ಯ ಮತ್ತು ಒಗ್ಗಟ್ಟನ್ನು ಕಾಪಾಡುವ ಮತ್ತು ಬಲಪಡಿಸುವ ಕಾರ್ಯದಲ್ಲಿ ನಾನು ನನ್ನನ್ನು ಅರ್ಪಿಸಿಕೊಳ್ಳುತ್ತೇನೆ ಎಂದು ಹೃತ್ಪೂರ್ವಕವಾಗಿ ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೆ ಎಂದೂ ನಾನು ಹಿಂಸೆಗೆ ಆಸ್ಪದ ಕೊಡುವುದಿಲ್ಲ. ಮತೀಯ, ಭಾಷಿಕ, ಪ್ರಾದೇಶಿಕ, ರಾಜಕೀಯ ಅಥವಾ ಆರ್ಥಿಕ ಸಂಕಷ್ಟಗಳ ಸಂದರ್ಭಗಳಲ್ಲಿ ಎಲ್ಲಾ ಭಿನ್ನಾಭಿಪ್ರಾಯಗಳು ಮತ್ತು ವಿವಾದಗಳನ್ನು ಶಾಂತಿಯುತವಾಗಿ ಬಗೆಹರಿಸಿಕೊಳ್ಳುತ್ತೇನೆ. ಸಂವಿಧಾನಕ್ಕನುಸಾರವಾಗಿ ನಡೆದುಕೊಳ್ಳುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತೇನೆ.



## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಒಡ ಹುಟ್ಟಿದವರು. ನನ್ನ ದೇಶವನ್ನು ನಾನು ಬಹಳ ಪ್ರೀತಿಸುತ್ತೇನೆ. ಈ ನಾಡಿನ ಭವ್ಯ ಪರಂಪರೆಯನ್ನೂ ವೈಶಿಷ್ಟವನ್ನೂ ಕಂಡು ಹೆಮ್ಮೆಪಡುತ್ತೇನೆ. ಈ ನಾಡಿನ ಹಿರಿಮೆಯನ್ನು ಹೆಚ್ಚಿಸಲು ಅನವರತ ದುಡಿಯುತ್ತೇನೆ. ನನ್ನ ತಂದೆ ತಾಯಿಗಳು ಮತ್ತು ಹಿರಿಯರನ್ನು ನಾನು ಗೌರವಿಸುತ್ತೇನೆ. ಎಲ್ಲರೊಡನೆಯೂ ಪ್ರೀತಿ ಹಾಗೂ ಗೌರವದಿಂದ ನಡೆದುಕೊಳ್ಳುತ್ತೇನೆ. ನನ್ನ ನಾಡಿಗೂ, ನನ್ನ ನಾಡಿನ ಪ್ರಜೆಗಳಿಗೂ ಸೇವೆ ಮಾಡಲು ಮುಂದೆ ನಿಲ್ಲುತ್ತೇನೆ. ಅವರ ಏಳಿಗೆಯನ್ನೂ, ಸಮೃದ್ಧಿಯನ್ನೂ ಹೊಂದುವುದನ್ನು ಕಂಡು ನಾನು ಅತ್ಯಾನಂದ ಪಡುತ್ತೇನೆ.

# ಮುನ್ನುಡಿ

## ಪಠ್ಯಪುಸ್ತಕದೊಳಗೆ. . .

> ಕನ್ನಡ ಎನೆ ಕುಣಿದಾಡುವುದೆನ್ನೆದೆ
> ಕನ್ನಡ ಎನೆ ಕಿವಿ ನಿಮಿರುವುದು - **ಕುವೆಂಪು**

ತಮಿಳುನಾಡಿನ ವಿಶಿಷ್ಟ ಸಂಸ್ಕೃತಿ, ಭಾಷೆ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು ತಮಿಳುನಾಡು ರಾಜ್ಯ ಶಿಕ್ಷಣ ನೀತಿ 2025 ಅನ್ನು ರೂಪಿಸಲಾಗಿದೆ. ಇದು ಮಕ್ಕಳಿಗೆ ಮೂಲಭೂತ ಸಾಕ್ಷರತೆಯ ಅವಶ್ಯಕತೆ ಮತ್ತು ಶಿಕ್ಷಣದ ಪ್ರಾಮುಖ್ಯತೆಯನ್ನು ಗುರುತಿಸುತ್ತದೆ, ತಮಿಳುನಾಡಿನ ಪ್ರತಿಯೊಂದು ಮಗುವೂ ಕೇಳುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದು ಸೇರಿದಂತೆ ವಯಸ್ಸಿಗೆ ಸೂಕ್ತವಾದ ಮೂಲ ಭಾಷಾ ಕೌಶಲ್ಯಗಳನ್ನು ಪಡೆದುಕೊಳ್ಳುತ್ತದೆ ಎಂದು ಒತ್ತಿ ಹೇಳುತ್ತದೆ. ಭಾಷೆ ಎಲ್ಲಾ ವಿಷಯಗಳನ್ನು ಕಲಿಯಲು ಅಡಿಪಾಯ ರೂಪಿಸುವುದರಿಂದ ಮಕಳು ತಮ್ಮ ಅನ್ವೇಷಣೆಯ ದಾರಿಗಳನ್ನು ಕಂಡುಕೊಳ್ಳಲು ಮತ್ತು ಅಭಿವೃದ್ಧಿಪಡಿಸಲು ಹಾಗೂ ಸಮಾಜದಲ್ಲಿ ಗೌರವದಿಂದ ಬದುಕಲು ಮಾರ್ಗದರ್ಶನ ನೀಡಲು ಈ ಪಠ್ಯಪುಸ್ತಕವನ್ನು ರಚಿಸಲಾಗಿದೆ.

ಕುತೂಹಲ ಮತ್ತು ಹೊಸದನ್ನು ಕಂಡು ಹಿಡಿಯುವ ಮಕ್ಕಳ ಸ್ವಭಾವವನ್ನು ಗುರುತಿಸುವ ಈ ಪಠ್ಯಪುಸ್ತಕವು ಅವರಿಗೆ ಪರಿಚಿತ ಹಾಗೂ ಹತ್ತಿರದ ವಿಷಯಗಳ ಆಧಾರದ ಮೇಲೆ ಪಾಠಗಳನ್ನು ಮತ್ತು ಭಾಷಾ ಆಟಗಳು ಇತ್ಯಾದಿಗಳನ್ನು ಪ್ರಸ್ತುತಪಡಿಸುತ್ತದೆ.




## ಪಠ್ಯಕ್ರಮ

ಪ್ರತಿಯೊಂದು ಪಾಠವೂ ಚಿಂತನೆಗೆ ಅವಕಾಶ ಮಾಡಿಕೊಡುವ ಪ್ರಶ್ನೆಗಳಿಂದ ಪ್ರಾರಂಭವಾಗುತ್ತದೆ. ಮಕ್ಕಳು ಸ್ವಂತ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ರೀತಿಯಲ್ಲಿ ಪಾಠವನ್ನು ರಚಿಸಲಾಗಿದೆ. ಇದು ಅವರ ಸ್ಮರಣಶಕ್ತಿ ಮತ್ತು ಗ್ರಹಿಕೆಯ ಕೌಶಲ್ಯವನ್ನು ಬಲಪಡಿಸುತ್ತದೆ. ಮಕ್ಕಳು ಪಡೆದುಕೊಳ್ಳಬೇಕಾದ ಮೂಲಭೂತ ಭಾಷಾ ಕೌಶಲ್ಯಗಳಾದ ಆಲಿಸುವುದು, ಮಾತನಾಡುವುದು, ಓದುವುದು ಮತ್ತು ಬರೆಯುವುದನ್ನು ಪಠ್ಯಕ್ರಮದಲ್ಲಿ ಈ ಕೆಳಗಿನಂತೆ ಪ್ರಸ್ತುತಪಡಿಸಲಾಗಿದೆ.

**ಘಟಕ 1**

1. **ತುತ್ತೂರಿ**

   (ಪದ್ಯವನ್ನು ರಾಗವಾಗಿ ಹಾಡುವರು ಮತ್ತು ಅಭ್ಯಾಸ ಚಟುವಟಿಕೆಗಳನ್ನು ಮಾಡುವರು.)

2. **ಊಟದ ಸ್ಪರ್ಧೆ**

   - ಮಕ್ಕಳಲ್ಲಿ ಸ್ಪರ್ಧಾತ್ಮಕ ಚಟುವಟಿಕೆ ಬೆಳೆಯುವುದು.

**ಘಟಕ 2**

3. **ಮೃಗಾಲಯದಲ್ಲಿ ಒಂದು ದಿನ**

   - ಪ್ರಾಣಿಗಳ ಬಗ್ಗೆ ಅವುಗಳ ಜೀವನಶೈಲಿಯ ಬಗ್ಗೆ ಮಕ್ಕಳು ತಿಳಿದುಕೊಳ್ಳುವರು.

4. **ಪ್ರಾಮಾಣಿಕ ವ್ಯಕ್ತಿ**

   - ಬೇರೆಯವರ ವಸ್ತುಗಳಿಗೆ ಹಾಗೂ ಹಣಕ್ಕೆ ಆಸೆ ಪಡದೆ ಪ್ರಾಮಾಣಿಕತೆಯಿಂದ ಇರಬೇಕು ಎಂಬುದನ್ನು ಈ ಪಾಠದ ಮೂಲಕ ತಿಳಿದುಕೊಳ್ಳುವರು.

## ಮೂಲಭೂತ ಕೌಶಲಗಳನ್ನು ಅಭಿವೃದ್ಧಿಪಡಿಸುವ ತರಬೇತಿ ಚಟುವಟಿಕೆಗಳು




## ಪಠ್ಯ ಪುಸ್ತಕದಲ್ಲಿ ಕಲಿತದ್ದನ್ನು ದೃಢಪಡಿಸುವ ಮೌಲ್ಯಮಾಪನ

- ಕಲಿತದ್ದನ್ನು ಮತ್ತೆ ನೆನಪಿಸಿಕೊಳ್ಳುವ ಭಾಗ – ನನ್ನ ನೆನಪಿನಲ್ಲಿ
- ಕಲಿತದ್ದನ್ನು ಪರೀಕ್ಷಿಸುವ ಭಾಗ (ಯೋಚಿಸಿ ಉತ್ತರಿಸುವುದು ಕಥೆ ಹೇಳುವುದು, ಹಾಡುವುದು). – ಕಲಿಕಾ ಪಯಣ
- ಮಕ್ಕಳು ತಾವು ಕಲಿತದ್ದನ್ನು ತಿಳಿದುಕೊಳ್ಳುವ ಭಾಗ – ನಾನು ಕಲಿತದ್ದು
- ಪ್ರತಿ ಘಟಕಕ್ಕೂ ನಿರಂತರ ಮೌಲ್ಯಮಾಪನ – ನಾನೇ ಮಾಡುತ್ತೇನೆ




ಕೊನೆಯದಾಗಿ ಈ ಪಠ್ಯಪುಸ್ತಕವು ಪ್ರತಿಯೊಂದು ಮಗುವೂ ಭವಿಷ್ಯದ ಜೀವನಕ್ಕೆ ಬೇಕಾದ ಶಾಶ್ವತವಾದ ಶೈಕ್ಷಣಿಕ ಅಭಿಪ್ರಾಯವನ್ನು ಪಡೆಯುವುದು. ಯಾವುದೇ ಮಗುವೂ ಕಲಿಕೆಯಲ್ಲಿ ಹಿಂದೆ ಉಳಿಯದಂತೆ ಸಮಾನ ಅವಕಾಶಗಳೊಂದಿಗೆ ಮೂಲಭೂತ ಸಾಕ್ಷರತೆಯನ್ನು ಸಾಧಿಸುವುದನ್ನು ನಿರೀಕ್ಷಿಸಲಾಗಿದೆ.

# ಪರಿವಿಡಿ


| ಘಟಕ | ಶೀರ್ಷಿಕೆ | ಪುಟ ಸಂಖ್ಯೆ |
|---|---|---|
| 1 | 1. ತುತ್ತೂರಿ (ಪದ್ಯ) | 1 |
| | 2. ಊಟದ ಸ್ಪರ್ಧೆ | 14 |
| 2 | 3. ಮೃಗಾಲಯದಲ್ಲಿ ಒಂದು ದಿನ | 27 |
| | 4. ಪ್ರಾಮಾಣಿಕ ವ್ಯಕ್ತಿ | 40 |




ಘಟಕ 1

# 1. ತುತ್ತೂರಿ (ಪದ್ಯ)



ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮಪದನಿಸ ಊದಿದನು
ಸನಿದಪ ಮಗರಿಸ ಊದಿದನು
ತನಗೇ ತುತ್ತೂರಿ ಇದೆಯೆಂದ
ಬೇರಾರಿಗು ಅದು ಇಲ್ಲೆಂದ
ಕಸ್ತೂರಿ ನಡೆದನು ಬೀದಿಯಲಿ
ಜಂಭದ ಕೋಳಿಯ ರೀತಿಯಲಿ
ತುತ್ತೂರಿಯೂದುತ ಕೊಳದ ಬಳಿ
ನಡೆದನು ಕಸ್ತೂರಿ ಸಂಜೆಯಲಿ
ಜಾರಿತು ನೀರಿಗೆ ತುತ್ತೂರಿ
ಗಂಟಲು ಕಟ್ಟಿತು ನೀರೂರಿ
ಸರಿಗಮ ಊದಲು ನೋಡಿದನು
ಗಗ ಗಗ ಸದ್ದನು ಮಾಡಿದನು
ಬಣ್ಣವು ನೀರಿನ ಪಾಲಾಯ್ತು
ಬಣ್ಣದ ತುತ್ತೂರಿ ಬೋಳಾಯ್ತು
ತುತ್ತೂರಿ ಬಣ್ಣವು ಹಾಳಾಯ್ತು
ಜಂಭದ ಕೋಳಿಗೆ ಗೋಳಾಯ್ತು.

ಜಿ.ಪಿ. ರಾಜರತ್ನಂ

## ಚಿತ್ರ ಸಹಿತ ಪದಗಳ ಅರ್ಥ

ತುತ್ತೂರಿ – ಒಂದು ಸಂಗೀತ ವಾದ್ಯ



ಕಾಸು – ಹಣ




ಸಂಜೆ – ಸಾಯಂಕಾಲ



ಕೊಳ – ನೀರಿನ ತಾಣ



## ಅಭ್ಯಾಸ



### ಅ. ಒಂದು ವಾಕ್ಯದಲ್ಲಿ ಉತ್ತರಿಸಿ

1. ಕಸ್ತೂರಿಯು ಏನನ್ನು ಕೊಂಡನು?

_____

2. ಕಸ್ತೂರಿಯು ಬೀದಿಯಲ್ಲಿ ಯಾವ ರೀತಿ ನಡೆದನು?

_____

3. ಕಸ್ತೂರಿಯ ತುತ್ತೂರಿ ಎಲ್ಲಿಗೆ ಬಿದ್ದಿತು?

_____

4. ತುತ್ತೂರಿ ಏನಾಯ್ತು?

_____

5. ಈ ಪದ್ಯವನ್ನು ಬರೆದವರು ಯಾರು?

_____

### ಆ. ಪದ್ಯದಲ್ಲಿ ಬರುವ ಪ್ರಾಸ ಪದಗಳನ್ನು ಬರೆಯಿರಿ

**ಉದಾ:** ತುತ್ತೂರಿ – ಕಸ್ತೂರಿ

_____ _____

_____ _____

_____



## ಇ. ಹೊಂದಿಸಿ ಬರೆಯಿರಿ



1. ಗೋಳು + ಆಯ್ತು – ಬೇರಾರಿಗೂ _____
2. ಸಂಜೆ + ಅಲ್ಲಿ – ಬೀದಿಯಲ್ಲಿ _____
3. ಬೇರೆ + ಯಾರಿಗೂ – ಸಂಜೆಯಲ್ಲಿ _____
4. ಬೀದಿ + ಅಲ್ಲಿ – ಗೋಳಾಯ್ತು _____

## ಈ. ಪದ್ಯದ ಮುಂದಿನ ಸಾಲುಗಳನ್ನು ಬರೆದು ಪೂರ್ಣಗೊಳಿಸಿ



1. ತುತ್ತೂರಿಯೂದುತ _____
2. _____ ಸಂಜೆಯಲಿ
3. ಜಾರಿತು _____
4. _____ ನೀರೂರಿ.

## ಉ. ಕೊಟ್ಟಿರುವ ವಾಕ್ಯಗಳಲ್ಲಿ ಗೆರೆ ಎಳೆದ ಪದಗಳನ್ನು ಸರಿಪಡಿಸಿ ಬರೆಯಿರಿ



1. <u>ಬನ್ನದ</u> ತಗಡಿನ ತುತ್ತೂರಿ – _____
2. ಕಸ್ತೂರಿ <u>ನಡೆದಣು</u> ಬೀದಿಯಲಿ – _____
3. ಜಂಭದ <u>ಕೋಲಿಯ</u> ರೀತಿಯಲಿ – _____
4. <u>ಜಾರಿಥು</u> ನೀರಿಗೆ ತುತ್ತೂರಿ – _____
5. ಗಂಟಲು <u>ಕಠಿತು</u> ನೀರೂರಿ – _____

## ಊ. ಓದಿ ಉತ್ತರ ಬರೆಯಿರಿ



### ಓದುವ ಹಲಗೆ

| | | | |
|---|---|---|---|
| ತುತ್ತೂರಿ | ತಗಡಿನ | ಕಸ್ತೂರಿ | ಊದಿದನು |
| ನಡೆದನು | ಬೀದಿಯಲಿ | ಜಂಬದ ಕೋಳಿ | ಸಂಜೆಯಲಿ |
| ಗಂಟಲು | ನೋಡಿದನು | ಮಾಡಿದನು | ಜಾರಿತು |
| ಕೊಳದ | ಪಾಲಾಯ್ತು | ಬೋಳಾಯ್ತು | ಹಾಳಾಯ್ತು |

ಎಲ್ಲಾ ಪದಗಳನ್ನು ಓದಿ ಮುಗಿಸಿದ ಮಕ್ಕಳು



## ಭಾಷಾ ಚಟುವಟಿಕೆ



### ಅ. ಮಾದರಿಯಂತೆ ವಾಕ್ಯ ರಚನೆ ಮಾಡಿ

ಉದಾ: ಭಾರತಿ ಊಟ ಮಾಡಿದಳು.

| | | |
|---|---|---|
| ಭಾರತಿ<br>ರಹೀಮ್<br>ಸುರೇಶ<br>ಗೆಳೆಯರು | ಆಟ<br>ಊಟ<br>ಶಾಲೆಗೆ | ಮಾಡಿದಳು<br>ಹೋದಳು<br>ಹೋದನು<br>ಮಾಡಿದನು<br>ಆಡಿದರು |

1. _____

2. _____

3. _____

4. _____

5. _____

### ಆ. ಮಾದರಿಯಂತೆ ಆವರಣದಲ್ಲಿ ಕೊಟ್ಟಿರುವ ಸೂಕ್ತವಾದ ಪದವನ್ನು ಆರಿಸಿ ಬರೆದು ವಾಕ್ಯಗಳನ್ನು ಪೂರ್ಣಗೊಳಿಸಿ

(ದುಂಡಾಯಿತು, ಚುರುಕಾಯಿತು, ಇಂಪಾಯಿತು, ಹೆಚ್ಚಾಯಿತು, ಬೆಣ್ಣೆಯಾಯಿತು, ಹಸಿರಾಯಿತು, ಹಳ್ಳವಾಯಿತು, ತಂಪಾಯಿತು)



1. ಕೇಳಿ ಕೇಳಿ ಕಿವಿ _____ಇಂಪಾಯಿತು_____

2. ನಕ್ಕು ನಕ್ಕು ಆರೋಗ್ಯ _____

3. ಹಾಡಿ ಹಾಡಿ ರಾಗ _____

4. ಬರೆದು ಬರೆದು ಅಕ್ಷರ _____

5. ಮಳೆ ಸುರಿದು ಸುರಿದು ಭೂಮಿ _____

6. ಮೊಸರು ಕಡೆದು ಕಡೆದು _____

7. ಗಾಳಿ ಬೀಸಿ ಬೀಸಿ ಧಗೆ _____

8. ಹನಿ ಹನಿ ಗೂಡಿ _____

## ಇ. ಚಿತ್ರಕ್ಕೆ ಸೂಕ್ತವಾದ ವಾಕ್ಯಗಳನ್ನು ಸರಿಹೊಂದಿಸಿ ಬರೆಯಿರಿ






ಪಾದಾಚಾರಿಗಳೆ ಜೀಬ್ರಾ ಪಟ್ಟೆಯಲ್ಲಿ ರಸ್ತೆ ದಾಟಿ.

_____




ಶೌಚಾಲಯ ಬಳಸಿದ ನಂತರ ಸಾಬೂನಿನಿಂದ ಕೈ ತೊಳೆಯಿರಿ.

_____



ನೀರನ್ನು ಪೋಲು ಮಾಡಬೇಡಿ.

_____



ಕಸವನ್ನು ಕಸ ತೊಟ್ಟಿಯಲ್ಲಿಯೇ ಹಾಕಿ.

_____

## ಈ. ಕೊಟ್ಟಿರುವ ಪದಗಳನ್ನು ಬಳಸಿ ಕವಿತೆ ಪೂರ್ಣಗೊಳಿಸಿ



(ನೋಡಿ, ಅಟ್ಟ, ಮುಚ್ಚಳ, ತೆರೆದು, ತಿಂದು)

ನಮ್ಮ ಪುಟ್ಟಿ ಎಂತ ದಿಟ್ಟೆ

ತಟ್ಟೆ ಹಿಡಿದು ಹೊರಟೆ ಬಿಟ್ಟಳು

ಮೆಲ್ಲನೆ _____ ಹತ್ತಿ ಬಿಟ್ಟಳು

ಡಬ್ಬಿಯನ್ನು _____ ಬಿಟ್ಟಳು

ರವೆ ಉಂಡೆ _____ ಬಿಟ್ಟಳು

ಡಬ್ಬಿ _____ ಹಾಕಿಬಿಟ್ಟಳು

ಅಮ್ಮ ಬಂದು _____ ಬಿಟ್ಟಳು



## ಒಂದು ರೊಟ್ಟಿಯ ಕಥೆ

ಒಬ್ಬ ಅಜ್ಜ ಹಸಿವಿನಿಂದ ರಸ್ತೆಯ ಬದಿಯಲ್ಲಿ ಕುಳಿತಿದ್ದ. ಶಾಲೆಯಿಂದ ಬರುತ್ತಿದ್ದ ಪುಟ್ಟ ಹುಡುಗ ಆತನನ್ನು ನೋಡಿ ತನ್ನ ಡಬ್ಬಿಯಲ್ಲಿದ್ದ ರೊಟ್ಟಿಯನ್ನು ಅಜ್ಜನಿಗೆ ಕೊಟ್ಟ. ಅಜ್ಜನ ಕಣ್ಣಲ್ಲಿ ನೀರು ತುಂಬಿತು. "ಕಂದ ಇಂದು ನೀನು ನನ್ನ ಹಸಿವು ನೀಗಿಸಿದ್ದೀಯ ದೇವರು ನಿನ್ನನ್ನು ಕಾಪಾಡಲಿ "ಎಂದು ಆಶೀರ್ವದಿಸಿದ.





ವರ್ಷಗಳು ಕಳೆದವು ಆ ಹುಡುಗ ವೈದ್ಯನಾದ. ಒಂದು ದಿನ ಅದೇ ಅಜ್ಜ ಅನಾರೋಗ್ಯದಿಂದ ಆಸ್ಪತ್ರೆಗೆ ಬಂದ.ವೈದ್ಯ ಅಜ್ಜನನ್ನು ಗುರುತಿಸಿ ಪ್ರೀತಿಯಿಂದ ಚಿಕಿತ್ಸೆ ನೀಡಿದ. ಗುಣಮುಖನಾದ ಅಜ್ಜ ಆಸ್ಪತ್ರೆಯ ಬಿಲ್ಲು ಕೇಳಿದ. ವೈದ್ಯನು ನಗುತ್ತಾ ಹೇಳಿದ 'ಅಜ್ಜ ಈ ಬಿಲ್ಲಿನ ಹಣವನ್ನು ನಿಮ್ಮ ಆಶೀರ್ವಾದ ಬಹಳ ಹಿಂದಿಯೆ ಪಾವತಿಸಿದೆ' ಎಂದ.

**ನೀತಿ : ಹಣಕ್ಕಿಂತ ಮಾನವೀಯತೆ ದೊಡ್ಡದು**

**ಓದಲು ತೆಗೆದುಕೊಂಡ ಸಮಯ.**

1. ___:___ 2. ___:___ 3 ___:___

ಈ ಕಥೆಯ ಬಗ್ಗೆ ನಿಮ್ಮ ಅನಿಸಿಕೆಗಳನ್ನು ಶಿಕ್ಷಕರ ಜೊತೆ ಚರ್ಚಿಸಿ ಬರೆಯಿರಿ.

## ಭಾಷಾಭ್ಯಾಸ

### ವ್ಯಾಕರಣ



**ಕನ್ನಡ ವರ್ಣಮಾಲೆಯಲ್ಲಿ ಮೂರು ವಿಧಗಳಿವೆ**

1. ಸ್ವರಗಳು
2. ಯೋಗವಾಹಕಗಳು
3. ವ್ಯಂಜನಗಳು

**1. ಸ್ವರಗಳು :** ಸ್ವತಂತ್ರವಾಗಿ ಉಚ್ಚರಿಸಲ್ಪಡುವ ಅಕ್ಷರಗಳನ್ನು ಸ್ವರಗಳು ಎಂದು ಕರೆಯುತ್ತಾರೆ.

**ಉದಾ:** ಅ ಆ ಇ ಈ ಉ ಊ ಋ ಎ ಏ ಐ ಒ ಓ ಔ

### ಸ್ವರಗಳಲ್ಲಿ ಎರಡು ವಿಧಗಳಿವೆ.

1. ಹ್ರಸ್ವಸ್ವರ
2. ದೀರ್ಘಸ್ವರ

ಹ್ರಸ್ವಸ್ವರ : ಒಂದು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳನ್ನು ಹ್ರಸ್ವಸ್ವರಗಳು ಎಂದು ಕರೆಯಲಾಗುತ್ತದೆ.

ಉದಾ : ಅ ಇ ಉ ಋ ಎ ಒ

ದೀರ್ಘಸ್ವರ : ಎರಡು ಮಾತ್ರಾ ಕಾಲದಲ್ಲಿ ಉಚ್ಚರಿಸಲ್ಪಡುವ ಅಕ್ಷರಗಳನ್ನು ದೀರ್ಘಸ್ವರಗಳು ಎಂದು ಕರೆಯಲಾಗುತ್ತದೆ.

ಉದಾ : ಆ ಈ ಊ ಏ ಐ ಓ ಔ

**2. ಯೋಗವಾಹಕಗಳು :** ಯಾವುದಾದರೊಂದು ಸ್ವರದೊಂದಿಗೆ ಮಾತ್ರ ಪ್ರಯೋಗ ಮಾಡಬಹುದಾದ ಅಕ್ಷರಗಳನ್ನು ಯೋಗವಾಹಕಗಳು ಎನ್ನುವರು.

ಯೋಗವಾಹಕಗಳಲ್ಲಿ ಎರಡು ವಿಧ

ಉದಾ : 1. ಅನುಸ್ವಾರ (ಂ) ಅಂ

2. ವಿಸರ್ಗ (ಃ) ಅಃ

### ವ್ಯಂಜನಗಳು

ಸ್ವರಗಳ ಸಹಾಯದಿಂದ ಉಚ್ಚರಿಸಲ್ಪಡುವ ಅಕ್ಷರಗಳಿಗೆ ವ್ಯಂಜನಾಕ್ಷರಗಳು ಎಂದು ಕರೆಯುತ್ತಾರೆ.

**ಉದಾ :** ಕ್ + ಅ = ಕ

ಚ್ + ಅ = ಚ

### ವ್ಯಂಜನಗಳಲ್ಲಿ ಎರಡು ವಿಧ

1. ವರ್ಗೀಯ ವ್ಯಂಜನಗಳು
2. ಅವರ್ಗೀಯ ವ್ಯಂಜನಗಳು

## 1. ವರ್ಗೀಯ ವ್ಯಂಜನ



'ಕ' ವರ್ಗದಿಂದ' ಪ 'ವರ್ಗದ ಒಟ್ಟು 25 ಅಕ್ಷರಗಳನ್ನು ವರ್ಗೀಯ ವ್ಯಂಜನಗಳು ಎಂದು ಕರೆಯುತ್ತಾರೆ.

**ಉದಾ :**

| | | | | |
|---|---|---|---|---|
| ಕ | ಖ | ಗ | ಘ | ಙ |
| ಚ | ಛ | ಜ | ಝ | ಞ |
| ಟ | ಠ | ಡ | ಢ | ಣ |
| ತ | ಥ | ದ | ಧ | ನ |
| ಪ | ಫ | ಬ | ಭ | ಮ |

## 2. ಅವರ್ಗೀಯ ವ್ಯಂಜನ

'ಯ' ಕಾರದಿಂದ 'ಳ' ಕಾರದವರೆಗಿನ ಒಟ್ಟು ಒಂಬತ್ತು ಅಕ್ಷರಗಳನ್ನು ಅವರ್ಗೀಯ ವ್ಯಂಜನಗಳು ಎಂದು ಕರೆಯುತ್ತಾರೆ.

**ಉದಾ :** ಯ ರ ಲ ವ ಶ ಷ ಸ ಹ ಳ

**1. ಸ್ವರಗಳಲ್ಲಿ ಎಷ್ಟು ವಿಧಗಳು? ಅವು ಯಾವುವು?**

_____

**2. ಚಿತ್ರಕ್ಕೆ ಸರಿಹೊಂದುವ ವರ್ಗೀಯ ವ್ಯಂಜನಗಳ ಮೊದಲ ಅಕ್ಷರಗಳನ್ನು ಹೊಂದಿಸಿ.**

_____







ಚ ತ ಕ ಟ ಫ

### 3. ಅವರ್ಗೀಯ ವ್ಯಂಜನಗಳು ಎಂದರೇನು?

_____.

_____

## ಒತ್ತಕ್ಷರಗಳು

**ಒತ್ತಕ್ಷರಗಳು :** ವ್ಯಂಜನಗಳಿಗೆ ವ್ಯಂಜನಗಳನ್ನು ಸೇರಿಸಿ ಬರೆಯುವುದೇ ಒತ್ತಕ್ಷರಗಳು.

ಒತ್ತಕ್ಷರಗಳಲ್ಲಿ ಎರಡು ವಿಧ

1. **ಸಜಾತಿಯ ಒತ್ತಕ್ಷರಗಳು**
2. **ವಿಜಾತಿಯ ಒತ್ತಕ್ಷರಗಳು**

**1. ಸಜಾತಿಯ ಒತ್ತಕ್ಷರಗಳು :** ಒಂದು ವ್ಯಂಜನಕ್ಕೆ ಅದೇ ವ್ಯಂಜನ ಸೇರಿದರೆ ಅದನ್ನು ಸಜಾತಿ ಒತ್ತಕ್ಷರ ಎನ್ನುವರು.

**ಉದಾ :** ಅಪ್ಪ, ಅಮ್ಮ, ಅಣ್ಣ

**2. ವಿಜಾತಿಯ ಒತ್ತಕ್ಷರ :** ಒಂದು ವ್ಯಂಜನಕ್ಕೆ ಬೇರೆ ಬೇರೆ ವ್ಯಂಜನ ಸೇರಿಸಿದರೆ ಅದನ್ನು ವಿಜಾತಿಯ ಒತ್ತಕ್ಷರಗಳು ಎಂದು ಕರೆಯುವರು.

**ಉದಾ :** ಇಡ್ಲಿ, ಶುಕ್ರ, ಭಕ್ತ.

**1. ಒತ್ತಕ್ಷರಕ್ಕೆ ಸಂಬಂಧಿಸಿದ ಚಿತ್ರಗಳು.**




ನಾಣ್ಯ



ಅಮ್ಮ



ಇಡ್ಲಿ



ಎಮ್ಮೆ




ಒಂಭತ್ತು



ಚಕ್ರ



ಅಪ್ಪ



ಬೆಕ್ಕು



ಕಣ್ಣು



ಪುಸ್ತಕ



ಹುತ್ತ



ಶ್ವಾನ

# ಲೇಖನ ಚಿಹ್ನೆಗಳು




**ಚುಕ್ಕೆಗಳನ್ನು ಸೇರಿಸಿ ಬಣ್ಣ ಹಚ್ಚಿ, ಚಿತ್ರದ ಹೆಸರನ್ನು ಬರೆಯಿರಿ.**





**ಶುಭನುಡಿ**

* ಬೆಳೆಯುವ ಸಿರಿ ಮೊಳಕೆಯಲ್ಲಿ.
* ನೋಡಿ ಕಲಿ ಮಾಡಿ ತಿಳಿ.
* ಪ್ರತ್ಯಕ್ಷ ಕಂಡರೂ ಪ್ರಮಾಣಿಸಿ ನೋಡು.



## ಹೇಳಿ ಅಭ್ಯಾಸ ಮಾಡಿ



### ವಾಕ್ಯಗಳು

- ಕಸ್ತೂರಿ ಸಂಜೆಯಲ್ಲಿ ಕೊಳದ ಬಳಿ ನಡೆದ.
- ಕಸವನ್ನು ಕಸ ತೊಟ್ಟಿಯಲ್ಲಿ ಹಾಕಿ.
- ಹಣಕ್ಕಿಂತ ದೊಡ್ಡದು ಮಾನವೀಯತೆ.

ವಾಕ್ಯಗಳನ್ನು ಮತ್ತೆ ಮತ್ತೆ ಓದಿ ಅಭ್ಯಾಸ ಮಾಡಿ

## ಕಲಿಕಾ ಪಯಣ



### ಸೃಜನಶೀಲ ಸಮಯ

- ಸ್ವರಗಳ ರಟ್ಟುಗಳನ್ನು ತಯಾರಿಸಿ.
- ವರ್ಗೀಯ ವ್ಯಂಜನಗಳನ್ನು ಬರೆಯಿರಿ.
- ಸಜಾತಿ ಒತ್ತಕ್ಷರದ ಪದಗಳನ್ನು ಬರೆಯಿರಿ.

ಒಳ್ಳೆಯ ಗುಣಗಳ ಬಗ್ಗೆ ಒಂದು ಕಾಲ್ಪನಿಕ ಕಥೆಯನ್ನು ರಚಿಸಿ ಅದನ್ನು ಗುಂಪಿನೊಂದಿಗೆ ಹಂಚಿಕೊಳ್ಳಬೇಕು.

## ನಾನು ಕಲಿತದ್ದು



1. ನನ್ನಿಂದ ಪದ್ಯವನ್ನು ರಾಗವಾಗಿ ಹಾಡಲು ಸಾಧ್ಯವಾಗುತ್ತದೆ ☐



2. ಚಿತ್ರವನ್ನು ನೋಡಿ ಮಾತನಾಡಲು ಸಾಧ್ಯವಾಗುತ್ತದೆ ☐
3. ಹ್ರಸ್ವಸ್ವರ, ದೀರ್ಘಸ್ವರ, ಯೋಗವಾಹಕಗಳು, ವರ್ಗೀಯ ವ್ಯಂಜನ ಹಾಗೂ ಅವರ್ಗೀಯ ವ್ಯಂಜನಗಳ ವಿವರಣೆಯನ್ನು ಉದಾಹರಣೆ ಸಹಿತ ತಿಳಿಯಲು ಸಾಧ್ಯವಾಗುತ್ತದೆ. ☐

ಕಲಿತುಕೊಂಡ ಕೌಶಲ್ಯಗಳಿಗೆ ✓ ಗುರುತು ಹಾಕಬೇಕು. ಪಡೆದ ಸಾಧನೆಗೆ ಅನುಗುಣವಾಗಿ ಬಣ್ಣ ಹಚ್ಚಬೇಕು.

## ನಾನೇ ಓದುವೆ; ಬಣ್ಣ ಹಚ್ಚುವೆ



### ವ್ಯಂಜನಗಳು

ಕು ಘು ಗು ನು ಚು ಬು ಭು ರು ಣು ತು
ದು ಪು ಶು ಜು ಫು ಥು ಜು ಸು ಹು
ಡು ಖು ಧು ಟು ಞು ಮು
ಢು ಷು ತು ವು ಲು ಝು ಯು ಥು ಳು

| | | | |
|---|---|---|---|
| ಹಸು | ದುಂಬಿ | ಗುಡಿ | ತುರಿಕೆ |
| ದುಡಿಮೆ | ಬುಗುರಿ | ಪುಸ್ತಕ | ಗುಡುಗು |
| ಗುರಿ | ರುದ್ರ | ಸುಮ | ಹುಡುಗಾಟ |
| | ನುಗ್ಗೆಕಾಯಿ | ಚುರುಕು | |

ಕುದುರೆ
ಓಡುವ ಕುದುರೆ
ನೆಗೆದು ನೆಗೆದು ಓಡುವ ಕುದುರೆ



ತುತ್ತೂರಿ
ತಗಡಿನ ತುತ್ತೂರಿ
ಬಣ್ಣದ ತಗಡಿನ ತುತ್ತೂರಿ

ಪುಸ್ತಕದ ಪುಟ
ಕಪ್ಪು ಮೋಡ
ಜುಳು ಜುಳು ನೀರು
ಬುಗುರಿ ಆಟ
ಮುತ್ತಿನಂತ ಮಾತು





ಗುಡುಗು ಗುಡುಗಿತು
ವಿದ್ಯಾರ್ಥಿ ಪುಸ್ತಕ ಓದಿದ
ಸುಮ ಕಲ್ಲಿನ ಮೇಲೆ ಕುಳಿತಳು
ತುಪ್ಪ ತಿನ್ನಲು ಬಲು ರುಚಿ





# ನಾನೇ ಓದುವೆ, ಬಣ್ಣ ಹಚ್ಚುವೆ



## ವ್ಯಂಜನಗಳು

ಕೂ ದೂ ಘೂ ಪೂ ಭೂ ಞೂ ಶೂ ಣೂ ಸೂ
ಧೂ ಜೂ ಛೂ ಜೂ ರೂ ಲೂ ವೂ ತೂ
ಖೂ ನೂ ಘೂ ಮೂ ಟೂ ಠೂ ಡೂ ಷೂ ಹೂ
ಗೂ ಚೂ ಬೂ ಝೂ ಯೂ ಢೂ ಥೂ ಳೂ

| | | | |
|---|---|---|---|
| ನೂತನ | ಹೂರಣ | ಪೂಜಾರಿ | ಸಾಬೂನು |
| ಕೂದಲು | ಜಾಮೂನು | ಕೂಡಿ | ಗೂಡು |
| ಧೂಮಪಾನ | ನೂರು | ಮೂರು | ಕುತೂಹಲ |
| | ಭೂತಕಾಲ | ಕೂಡಿರಿ | |

ಸೂಜಿ
ಚೂಪಾದ ಸೂಜಿ
ಉದ್ದವಾದ ಚೂಪಾದ ಸೂಜಿ



ಹೂವು
ಸುಂದರವಾದ ಹೂವು
ಹಳದಿ ಬಣ್ಣದ ಸುಂದರವಾದ ಹೂವು

ಮೂಡಣದ ಸೂರ್ಯ
ಚಂದದ ಮೂಗುತಿ
ದೂರದ ತೀರ
ನೂಲಿನ ಸೀರೆ



ಪೂಜಾಳು ಕೂದಲು ಬಾಚಿದಳು
ಜೂಲಿಯು ತೂಗುಯ್ಯಾಲೆ ಆಡಿದಳು
ಗೂಡಿನಲ್ಲಿ ಗುಬ್ಬಚ್ಚಿ ಮರಿಗಳು
ಗೂಳಿಯು ಗುಟುರು ಹಾಕುತ್ತಿದೆ





ಘಟಕ 1

# 2. ಊಟದ ಸ್ಪರ್ಧೆ




ಒಮ್ಮೆ ಊರಿನ ಹಿರಿಯರು ಶಾಲಾ ವಿದ್ಯಾರ್ಥಿಗಳಿಗೆ ಊಟದ ಸ್ಪರ್ಧೆಯನ್ನು ಏರ್ಪಡಿಸಿದರು. ಊರಿನ ಜನರು ಊಟದ ಸ್ಪರ್ಧೆಯನ್ನು ನೋಡಲು ಬಹಳ ಆಸಕ್ತಿಯಿಂದ ಬಂದರು.

ಎಲ್ಲಾ ವಿದ್ಯಾರ್ಥಿಗಳು ಬಹಳ ಕುತೂಹಲದಿಂದ ಸ್ಪರ್ಧೆ ಏರ್ಪಡಿಸಿದ ಸ್ಥಳಕ್ಕೆ ಬಂದರು. ಇದನ್ನು ನೋಡಲು ಊರಿನ ಜನರೆಲ್ಲ ಬಂದರು.



ವಿದ್ಯಾರ್ಥಿಗಳಿಗೆ ಯಾವ ರೀತಿ ಊಟ ಮಾಡಬೇಕು ಎನ್ನುವ ನಿಯಮಗಳನ್ನು ಹಿರಿಯರೊಬ್ಬರು ಈ ರೀತಿ ತಿಳಿಸಿದರು. ಮಕ್ಕಳೇ ನೀವು ಕೈಯನ್ನು ಮಡಚದೆ ಊಟ ಮಾಡಬೇಕು. ಯಾರು ಈ ನಿಯಮದ ಪ್ರಕಾರ ಊಟ ಮಾಡಿ ಬೇಗ ಮುಗಿಸುವರೊ ಅವರು ವಿಜೇತರು ಎಂದರು.




ಈ ಮಾತನ್ನು ಕೇಳಿದ ಸ್ಪರ್ಧಿಗಳು ಬಹಳ ಚಿಂತೆಗೊಳಗಾದರು. ಸ್ವಲ್ಪ ಹೊತ್ತು ಯೋಚಿಸಿದರು. ಪ್ರತಿಯೊಂದು ತಟ್ಟೆಯಲ್ಲಿದ್ದ ಊಟವನ್ನು ಕೈ ಮಡಚದೆ ಎತ್ತಿಕೊಂಡರು ಆದರೆ ಅವರೇ ಅದನ್ನು ತಿನ್ನಲು ಸಧ್ಯವಾಗಲಿಲ್ಲ. ಹೇಗೆ ಪ್ರಯತ್ನಿಸಿದರೂ ಕೈಯನ್ನು ಮಡಚದೆ ಊಟವನ್ನು ತಿನ್ನಲು ಆಗಲಿಲ್ಲ. ಆಗ ಎಲ್ಲರೂ ಕೈಮಡಚದೆ ತಿನ್ನಲು ಅನೇಕ ಉಪಾಯಗಳನ್ನು ಮಾಡಿ ವಿಫಲರಾದರು.



ಅವರಲ್ಲಿ ಒಬ್ಬ ವಿದ್ಯಾರ್ಥಿಗೆ ಒಂದು ಉಪಾಯ ಹೊಳೆಯಿತು. ಆ ವಿದ್ಯಾರ್ಥಿಯು ಅದನ್ನು ತನ್ನ ಗೆಳೆಯನ ಕಿವಿಯಲ್ಲಿ ಹೇಳಿದ. ಆಗ ಇಬ್ಬರು ವಿದ್ಯಾರ್ಥಿಗಳು ಒಬ್ಬರಿಗೊಬ್ಬರು ಎದುರು ಬದುರಾಗಿ ನಿಂತು ತಿನ್ನಲು ಪ್ರಾರಂಭಿಸಿದರು.



ಇದರಿಂದ ಕೈಮಡಚದೆಯೇ ತಿನ್ನಲು ಮತ್ತು ಸ್ಪರ್ಧೆಯಲ್ಲಿ ಗೆಲ್ಲಲು ಅನುಕೂಲವಾಯಿತು. ಇದನ್ನು ಕಂಡ ಇತರ ವಿದ್ಯಾರ್ಥಿಗಳೂ ಸಹ ಇದನ್ನೇ ಅನುಸರಿಸಿದರು. ಆದರೆ ಅದಾಗಲೇ ಸಮಯವಾಗಿದ್ದರಿಂದ ಸ್ಪರ್ಧೆಯಲ್ಲಿ ಇನ್ನಿತರ ವಿದ್ಯಾರ್ಥಿಗಳು ಗೆಲ್ಲಲಾಗಲಿಲ್ಲ.

ಊರಿನ ಹಿರಿಯರು ಇಬ್ಬರು ವಿದ್ಯಾರ್ಥಿಗಳ ಚತುರತೆಯನ್ನು ಕಂಡು ಮೂಗಿನ ಮೇಲೆ ಬೆರಳಿಟ್ಟು ಅವರ ಜಾಣತನಕ್ಕೆ ತಲೆದೂಗಿದರು. ಊಟದ ಸ್ಪರ್ಧೆಯಲ್ಲಿ ಗೆದ್ದ ಇಬ್ಬರು ವಿದ್ಯಾರ್ಥಿಗಳಿಗೆ ಬಹುಮಾನವನ್ನು ಕೊಟ್ಟು ಗೌರವಿಸಲಾಯಿತು.



## ಅಭ್ಯಾಸ



**ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ಊರಿನ ಹಿರಿಯರು ಯಾರಿಗಾಗಿ ಊಟದ ಸ್ಪರ್ಧೆಯನ್ನು ಏರ್ಪಡಿಸಿದ್ದರು?

_____

2. ಊಟದ ತಟ್ಟೆಯನ್ನು ಎಲ್ಲಿ ಇರಿಸಿದ್ದರು?

_____

3. ಸ್ಪರ್ಧಿಗಳು ಹೇಗೆ ಊಟ ಮಾಡಿದರು?

_____

4. ಊರಿನ ಹಿರಿಯರು ಏಕೆ ಮೂಗಿನ ಮೇಲೆ ಬೆರಳಿಟ್ಟುಕೊಂಡರು?

_____

5. ಸ್ಪರ್ಧೆಯಲ್ಲಿ ಭಾಗವಹಿಸಿ ಗೆದ್ದವರಿಗೆ ಏನು ದೊರೆಯಿತು?

_____

**ಆ. ಮಾದರಿಯಂತೆ ಬದಲಾಯಿಸಿ**



**ಮಾದರಿ** : ಮಡಚಿ – ಮಡಚದೆ

1. ಮುಗಿಸು – _____
2. ಕೊಂಡುಕೊಳ್ಳು – _____
3. ಭಾಗವಹಿಸು – _____
4. ನೋಡಿಕೊಂಡು – _____
5. ಎತ್ತಿಕೊಳ್ಳು – _____

**ಇ. ಸೇರಿಸಿ ಬರೆಯಿರಿ**

1. ಸ್ಪರ್ಧೆ + ಅನ್ನು = _____
2. ಕೈ + ಅನ್ನು = _____
3. ಹಿರಿಯರು + ಒಬ್ಬರು = _____
4. ತಟ್ಟೆಯಲ್ಲಿ + ಇದ್ದ = _____
5. ಆಸಕ್ತಿ + ಇಂದ = _____

**ಈ. ಓದಿ ಉತ್ತರ ಬರೆಯಿರಿ**



## ಓದುವ ಹಲಗೆ

| | | | |
|---|---|---|---|
| ಊಟದ | ಸ್ಪರ್ಧೆ | ಚಿಂತೆಗೊಳಗಾದರು | ಪಟ್ಟಿಗಳನ್ನು | ಪ್ರತಿಯೊಬ್ಬರೂ |
| ವಿದ್ಯಾರ್ಥಿಗಳು | | ಕುತೂಹಲ | ಉಪಾಯ | ಚತುರತೆ |
| ವಿಜೇತರು | | ಜನರು | ಕೋಣೆ | ತಲೆದೂಗಿದರು |
| ಹಿರಿಯರು | | ಯೋಚಿಸಿದರು | ನಿಯಮಗಳನ್ನು | ಬಹುಮಾನ |
| ಭಾಗವಹಿಸಿದರು | | ಕಾತುರ | ತಿನಿಸುಗಳನ್ನು | ಜಾಣತನ |
| ಗೌರವಿಸುವುದು | | ಮೆಚ್ಚುಗೆ | ತಟ್ಟೆಯಲ್ಲಿ | |

ಎಲ್ಲಾ ಪದಗಳನ್ನು ಓದಿ ಮುಗಿಸಿದ ಮಕ್ಕಳು.



1. ಓದುವ ಹಲಗೆಯಲ್ಲಿ ಇರುವ ಪದಗಳಲ್ಲಿ ಕೊನೆಯ ಅಕ್ಷರ 'ರು' ಬರುವ ಪದಗಳನ್ನು ಬರೆಯಿರಿ.

_____

2. 'ಚತುರತೆ' ಈ ಪದದ ಸಮನಾರ್ಥಕ ಪದ

_____

3. ಈ ಗಾದೆಯನ್ನು ಪೂರ್ಣಗೊಳಿಸಿ ಉಪಾಯ ಬಲ್ಲವನಿಗೆ

_____

4. 'ಬಹುಮಾನ' ಈ ಪದವನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬರೆಯಿರಿ.

_____

**ಉ. ಗುಂಪಿಗೆ ಸೇರದ ಪದಗಳಿಗೆ ವೃತ್ತ ಹಾಕಿ ಬರೆಯಿರಿ**



1. ಹಸು, ಸಿಂಹ, ಆಡು, ಕುರಿ
2. ಹಲಸಿನ ಹಣ್ಣು, ಮಾವಿನ ಹಣ್ಣು ,ಬಾಳೆಹಣ್ಣು, ನಿಂಬೆಹಣ್ಣು
3. ಮೊಸರು, ನೀರು, ಮಜ್ಜಿಗೆ, ಹಾಲು
4. ತರಗತಿ, ಆಟದಮೈದಾನ, ಅಂಚೆಕಛೇರಿ, ಶಾಲೆ
5. ಬದನೆ, ಟಮೊಟೊ, ಮೆಣಸಿನಕಾಯಿ, ಬಾಳೆಹಣ್ಣು

ಊ. ಚಿತ್ರಗಳ ಮೂಲಕ ವಚನಗಳ ಪರಿಚಯ

| ಏಕವಚನ | ಬಹುವಚನ |
|---|---|
|  ಮರ |  ಮರಗಳು |
|  ಹಣ್ಣು |  ಹಣ್ಣುಗಳು |
|  ಮಗು |  ಮಕ್ಕಳು |
|  ಎಲೆ |  ಎಲೆಗಳು |
|  ಆನೆ |  ಆನೆಗಳು |
|  ಚಕ್ರ |  ಚಕ್ರಗಳು |
|  ಕರು |  ಕರುಗಳು |
|  ಹುಡುಗ |  ಹುಡುಗರು |
|  ಹುಡುಗಿ |  ಹುಡುಗಿಯರು |

ಋ. ಚಿತ್ರ ನೋಡಿ ಮಾದರಿಯಂತೆ ಬರೆಯಿರಿ (ವಚನಗಳು)





ಹಸು



ಹಸುಗಳು













ಎ. ಆವರಣದಲ್ಲಿ ಕೊಟ್ಟಿರುವ ಪದಗಳನ್ನು ಬಳಸಿ ಖಾಲಿ ಬಿಟ್ಟ ಸ್ಥಳಕ್ಕೆ ಸೂಕ್ತ ಬಹುವಚನ ಪದಗಳನ್ನು ಬರೆಯಿರಿ

(ಅಣ್ಣಂದಿರು, ಚಿಕ್ಕಮ್ಮಂದಿರು, ಚಿಕ್ಕಪ್ಪಂದಿರು, ಹುಡುಗಿಯರು, ಚಾಲಕರು)



**ಮಾದರಿ:** ಅಕ್ಕ – ಅಕ್ಕಂದಿರು

ಅಣ್ಣ – _____

ಚಿಕ್ಕಪ್ಪ – _____

ಚಾಲಕ – _____

ಹುಡುಗಿ – _____

ಚಿಕ್ಕಮ್ಮ – _____

## ನಾನೇ ಮಾಡುವೆನು

ಏ. ಮಾದರಿಯಂತೆ ವಾಕ್ಯ ರಚಿಸಿ

**ಮಾದರಿ:** ನಾನು ಹಣ್ಣನ್ನು ತಿಂದೆ.

| | | |
|---|---|---|
| ನಾನು | ತಿಂದಳು | 1. _____ |
| ನಾವು | ತಿಂದರು | 2. _____ |
| ಅವನು | ತಿಂದನು | 3. _____ |
| ಅವಳು | ತಿಂದೆ | 4. _____ |
| ಅವರು | ತಿಂದೆವು | 5. _____ |

## ಜಾತ್ರೆಯ ಚಿತ್ರ




ಸನ್ನಿವೇಶ ನೋಡಿ ಮಾತನಾಡೋಣ ಮತ್ತು ಬರೆಯೋಣ

ಚಿತ್ರಗಳನ್ನು ಗಮನಿಸಿ ವ್ಯತ್ಯಾಸಗಳನ್ನು ಪಟ್ಟಿ ಮಾಡೋಣ







| ಕ್ರಮ ಸಂಖ್ಯೆ | ಚಿತ್ರ 1 | ಚಿತ್ರ 2 |
|---|---|---|
| 1 | | |
| 2 | | |
| 3 | | |
| 4 | | |
| 5 | | |

## ಚಿತ್ರಕಥೆ ಓದಿ

# ನರಿ ಮತ್ತು ಕೊಕ್ಕರೆ

ನರಿ ಮತ್ತು ಕೊಕ್ಕರೆ ಸ್ನೇಹಿತರಾಗಿದ್ದರು. ಒಂದು ದಿನ ನರಿ ಕೊಕ್ಕರೆಯನ್ನು ಊಟಕ್ಕೆ ಕರೆಯಿತು.




ಕೊಕ್ಕರೆ ನರಿಯ ಮನೆಗೆ ಊಟಕ್ಕೆ ಬಂದಿತು. ನರಿಯು ತಟ್ಟೆಯಲ್ಲಿ ಪಾಯಸವನ್ನು ಕೊಕ್ಕರೆಗೆ ನೀಡಿತು.




ತನ್ನ ಉದ್ದ ಕೊಕ್ಕಿನಿಂದ ತಟ್ಟೆಯಲ್ಲಿನ ಪಾಯಸವನ್ನು ತಿನ್ನಲಾಗಲಿಲ್ಲ.



ಇದರಿಂದ ನರಿ ತನಗೆ ಅವಮಾನ ಮಾಡಿತೆಂದು ಕೊಕ್ಕರೆಯು ಭಾವಿಸಿ ಅದಕ್ಕೆ ಬುದ್ಧಿ ಕಲಿಸಬೇಕೆಂದು ತೀರ್ಮಾನಿಸಿತು.




ನರಿಯು ಕೊಕ್ಕರೆಯ ಮನೆಗೆ ಊಟಕ್ಕೆ ಬಂದಾಗ ಕೊಕ್ಕರೆಯು ಉದ್ದನೆಯ ಬಾಯಿಯ ಹೂಜಿಗೆ ಪಾಯಸ ಹಾಕಿ ನರಿಗೆ ನೀಡಿತು.




ಕೊಕ್ಕರೆಯು ನರಿ ಅವಸ್ಥೆ ಪಡುವುದನ್ನು ನೋಡಿ ಹೀಗೆ ಹೇಳಿತು.



ನರಿಗೆ ತನ್ನ ತಪ್ಪಿನ ಅರಿವಾಗಿ ಕೊಕ್ಕರೆ ಬಳಿ ಕ್ಷಮೆ ಕೇಳಿತು. ಆಗ ಇಬ್ಬರೂ ಸಂತೋಷದಿಂದ ಪಾಯಸವನ್ನು ಸವಿದರು.




ಗೆಳೆಯರಿಬ್ಬರು ಸಂತೋಷದಿಂದ ಆಟವಾಡಲು ಹೋದರು.



**ಯಾರಿಗೂ ಮೋಸ ಮಾಡಬಾರದು, ಪ್ರಾಮಾಣಿಕತೆಯಿಂದ ಇರಬೇಕು.**

## ಭಾಷಾ ಆಟ

1. ನಾನು ಯಾರು ಗೊತ್ತೆ?
   ಸೋಗೆ ಗರಿ ಸೊಗಸು ನಾಟ್ಯ
   ರಂಗು ರಂಗು ನೂರು ಕಣ್ಣು
   ನಾನು ಯಾರು ಗೊತ್ತೇ?

2. ನೀರಲ್ಲಿ, ನೆಲದಲ್ಲಿ ನನ್ನ ವಾಸ
   ನನ್ನ ಬೆನ್ನು ಬಹಳ ಗಟ್ಟಿ
   ನಡಿಗೆ ಮಾತ್ರ ನಿಧಾನ
   ನಾನು ಯಾರು ಗೊತ್ತೆ?

3. ದೊಡ್ಡ ದೇಹ ಮೋಟು ಬಾಲ
   ಕಣ್ಣು ಸಣ್ಣ ದೊಡ್ಡ ಕಿವಿ
   ನಾನು ಯಾರು ಗೊತ್ತೆ?

4. ಹಸಿರು ರೆಕ್ಕೆ ಕೆಂಪು ಕೊಕ್ಕು
   ನೆಟ್ಟ ಕಣ್ಣು ಊಟ ಹಣ್ಣು
   ನಾನು ಯಾರು ಗೊತ್ತೆ?






# ನನ್ನಿಂದ ಸಾಧ್ಯ



## ಪದದೊಳಗಿನ ಪದ

ಪದದಲ್ಲಿರುವ ಅಕ್ಷರಗಳನ್ನು ಬಳಸಿ ಹಲವು ಪದಗಳನ್ನು ರಚಿಸೋಣ




## ಅಂತ್ಯಾಕ್ಷರ ಪದ

ಪದದ ಕೊನೆಯ ಅಕ್ಷರದಿಂದ ಆರಂಭವಾಗುವ ಹೊಸ ಪದ ರಚಿಸೋಣ.

ಮಾದರಿ:



## ಹೇಳಿ ಅಭ್ಯಾಸ ಮಾಡಿ



### ವಾಕ್ಯಗಳು

- ಮಕ್ಕಳು ಊಟದ ಸ್ಪರ್ಧೆಯಲ್ಲಿ ಭಾಗವಹಿಸಿದರು.
- ಮಕ್ಕಳ ಜಾಣತನಕ್ಕೆ ಊರಿನ ಹಿರಿಯರು ತಲೆದೂಗಿದರು.
- ನರಿಗೆ ತನ್ನ ತಪ್ಪಿನ ಅರಿವಾಗಿ ಕೊಕ್ಕರೆ ಬಳಿ ಕ್ಷಮೆಯನ್ನು ಕೇಳಿತು.

ವಾಕ್ಯಗಳನ್ನು ಮತ್ತೆ ಮತ್ತೆ ಓದಿ ಅಭ್ಯಾಸ ಮಾಡಿ

## ಕಲಿಕಾ ಪಯಣ



### ಸೃಜನಶೀಲ ಸಮಯ

- ಓದುವ ಹಲಗೆ ಸಹಾಯದಿಂದ ಪದಗಳ ರಟ್ಟು ತಯಾರಿಸಿ.
- ಏಕವಚನ, ಬಹುವಚನ ಪದಗಳ ರಟ್ಟುಗಳನ್ನು ರಚಿಸಿ.
- ಯಾವುದಾದರೂ ಎರಡು ಒಗಟುಗಳನ್ನು ರಚಿಸಿ.

ಶಿಕ್ಷಕರ ಸಹಾಯದಿಂದ ಯಾವುದಾದರು ಪಂಚತಂತ್ರ ಕಥೆಗಳನ್ನು ಕೇಳಿ ಅದರ ಬಗ್ಗೆ ಚರ್ಚಿಸಿ.

## ನಾನು ಕಲಿತದ್ದು





1. ವಿದ್ಯಾರ್ಥಿಗಳು ಪಾಠವನ್ನು ಓದುವ, ಓದಿ ಪ್ರಶ್ನೆಗಳಿಗೆ ಉತ್ತರಿಸುವ ಗುಣವನ್ನು ಬೆಳೆಸಿಕೊಳ್ಳುವರು. ☐
2. ಏಕವಚನ, ಬಹುವಚನ ಎಂಬುದರ ಬಗ್ಗೆ ತಿಳಿದುಕೊಳ್ಳುವರು. ☐
3. ಕಥೆಗಳ ಮೂಲಕ ಒಳ್ಳೆಯ ಮೌಲ್ಯಗಳನ್ನು ಬೆಳೆಸಿಕೊಳ್ಳುವರು. ☐

ಕಲಿತುಕೊಂಡ ಕೌಶಲ್ಯಗಳಿಗೆ ✓ ಗುರುತು ಹಾಕಬೇಕು. ಪಡೆದ ಸಾಧನೆಗೆ ಅನುಗುಣವಾಗಿ ಬಣ್ಣ ಹಚ್ಚಬೇಕು.

## ನಾನೇ ಓದುವೆ, ಬಣ್ಣ ಹಚ್ಚುವೆ



### ವ್ಯಂಜನಗಳು

ಕೃ ದೃ ಘೃ ಘೃ ಪೃ ಭೃ ಞೃ ಶೃ ಣೃ ಸೃ
ಖೃ ಜೃ ಳೃ ಜೃ ರೃ ಲೃ ವೃ ತೃ
ಗೃ ನೃ ಫೃ ಮೃ ಟೃ ಳೃ ಡೃ ಹೃ ಳೃ
ಚೃ ಬೃ ಝೃ ಯೃ ಢೃ

| | | | |
|---|---|---|---|
| ವೃಷಭ | ಗೃಹಿಣಿ | ಅಮೃತ | ಜಾಗೃತಿ |
| ಮಾತೃ | ಶೃಂಗ | ಕೃಷಿಕ | ಮೃಗರಾಜ |
| ಗೃಹಪಾಠ | ಮಾತೃಭಾಷೆ | ಸದೃಢ | ಹೃದಯ |
| ಬೃಂದಾವನ | ಕೃತಿಕಾ | ಅಮೃತ | ಸೃಷ್ಟಿ |

ಮೃಗಾಲಯ
ಪ್ರಾಣಿಗಳ ಮೃಗಾಲಯ
ಮೈಸೂರಿನಲ್ಲಿರುವ ಪ್ರಾಣಿಗಳ ಮೃಗಾಲಯ



ಕೃಷಿಕ
ಹೊಲದಲ್ಲಿ ಕೃಷಿಕ
ಜೋಳದ ಹೊಲದಲ್ಲಿ ಕೃಷಿಕ

ಪೃಥ್ವಿಯಲ್ಲಿ ಮಳೆ
ವೃತ್ತಾಕಾರದ ಬಳೆ
ಕೃತಕ ಬಣ್ಣ



ಬೃಹತ್ ಸಮ್ಮೇಳನ
ಶೃಂಗಸಭೆ ಸೇರಿದರು
ತೃತೀಯ ಪುಸ್ತಕ





# ಘಟಕ 2

# 3. ಮೃಗಾಲಯದಲ್ಲಿ ಒಂದು ದಿನ

## ಸಂಭಾಷಣೆ

ಮಗ : ಅಮ್ಮ ಇಂದು ನಾವು ಎಲ್ಲಿಗೆ ಹೋಗುತ್ತಿದ್ದೇವೆ?

ಅಮ್ಮ : ಇಂದು ನಾವು ಮೃಗಾಲಯಕ್ಕೆ ಹೋಗುತ್ತಿದ್ದೇವೆ.

ಮಗ : ವಾವ್ ! ನನಗೆ ತುಂಬಾ ಸಂತೋಷವಾಗಿದೆ.

ಅಮ್ಮ : ಬಾ ಬೇಗ ಸಿದ್ಧವಾಗು.

ಮಗ : ನಾನು ನೀರಿನ ಬಾಟಲ್ ಮತ್ತು ತಿಂಡಿಯನ್ನು ತೆಗೆದುಕೊಂಡಿದ್ದೇನೆ.








ಅಮ್ಮ : ಸರಿ, ಚೆನ್ನಾಗಿದೆ ಈಗ ಹೊರಡೋಣ.

ಮಗ : ಅಮ್ಮ ಇಲ್ಲಿ ಎಷ್ಟೊಂದು ಜನರಿದ್ದಾರೆ?

ಅಮ್ಮ : ಇಂದು ರಜಾದಿನ ಅದಕ್ಕಾಗಿ ಜನರು ಹೆಚ್ಚು ಜನರು ಬಂದಿದ್ದಾರೆ.

ಮಗ : ಮೊದಲು ಯಾವ ಪ್ರಾಣಿಯನ್ನು ನೋಡೋಣ?

ಅಮ್ಮ : ಮೊದಲು ಸಿಂಹವನ್ನು ನೋಡೋಣ ನಡಿ.

ಮಗ : ಅಮ್ಮ ಸಿಂಹ ತುಂಬಾ ದೊಡ್ಡದಾಗಿದೆ!

ಅಮ್ಮ : ಹೌದು ಅದನ್ನು ಕಾಡಿನ ರಾಜ ಎಂದು ಕರೆಯುತ್ತಾರೆ.






ಮಗ : ಆನೆಯ ಸೊಂಡಿಲು ತುಂಬಾ ಉದ್ದವಾಗಿದೆ?

ಅಮ್ಮ : ಹೌದು ಅದು ಸೊಂಡಲಿನಿಂದ ಆಹಾರವನ್ನು ತೆಗೆದುಕೊಳ್ಳುತ್ತದೆ.

ಮಗ : ಆನೆ ತುಂಬಾ ಶಾಂತವಾಗಿದೆ.

ಅಮ್ಮ : ಅದಕ್ಕೆ ಹಲವರಿಗೆ ಆನೆ ಎಂದರೆ ತುಂಬಾ ಇಷ್ಟ.

ಮಗ : ಅಮ್ಮ, ಕೋತಿಗಳು ಎಷ್ಟು ಚೆನ್ನಾಗಿ ನೆಗೆಯುತ್ತಿವೆ.

ಅಮ್ಮ : ಅವು ತುಂಬಾ ಚುರುಕು ಪ್ರಾಣಿಗಳು.

ಮಗ : ಅವುಗಳ ಆಟ ನೋಡಲು ತುಂಬಾ ಚೆನ್ನಾಗಿದೆ.

ಅಮ್ಮ : ರಾಹುಲ್, ಈವಾಗ ಊಟದ ಸಮಯ ಊಟ ಮಾಡೋಣವೇ?

ಮಗ : ಸರಿ, ಅಮ್ಮ! ನನಗೆ ಬಹಳ ಹಸಿವಾಗಿದೆ.






ಅಮ್ಮ : ಬಾ, ಇಲ್ಲಿ ಕುಳಿತು ಊಟ ಮಾಡೋಣ.

ಮಗ : ಅಮ್ಮಾ, ಇಂದು ಮೃಗಾಲಯದ ಪ್ರವಾಸ ತುಂಬಾ ಸಂತೋಷವನ್ನುಂಟು ಮಾಡಿತು.

ಅಮ್ಮ : ಹೌದು, ನಾವು ಅಪರೂಪದ ಪ್ರಾಣಿಗಳನ್ನು ನೋಡಿದೆವು.

ಮಗ : ನನ್ನನ್ನು ಮೃಗಾಲಯಕ್ಕೆ ಕರೆದುಕೊಂಡು ಬಂದಿದ್ದಕ್ಕೆ ಧನ್ಯವಾದಗಳು ಅಮ್ಮ.

ಅಮ್ಮ : ನನಗೂ ಸಂತೋಷವಾಯಿತು ರಾಹುಲ್.

## ಅ. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ



1. ರಾಹುಲ್ ಮೃಗಾಲಯದಲ್ಲಿ ಯಾವ ಯಾವ ಪ್ರಾಣಿಗಳನ್ನು ನೋಡಿದ?

_____

2. ಈ ಮೃಗಾಲಯದಲ್ಲಿ ನಿನಗೆ ಇಷ್ಟವಾದ ಪ್ರಾಣಿ ಯಾವುದು?

_____

3. ಆ ಪ್ರಾಣಿ ನಿಮಗೆ ಯಾಕೆ ಇಷ್ಟ?

_____

## ಅಭ್ಯಾಸ



### 1. ಮಾದರಿಯಂತೆ ಓದಿ



ಶಿಕ್ಷಕರು ಪಾಠವನ್ನು ಓದುವುದನ್ನು ಕೇಳಿ, ಮಾದರಿಯಂತೆ ಓದೋಣ.

### 2 ಕಥೆಯಲ್ಲಿ ಇಷ್ಟವಾದ ಪದಗಳನ್ನು ಬರೆಯಿರಿ.

1 _____ 6 _____

2 _____ 7 _____

3 _____ 8 _____

4 _____ 9 _____

5 _____ 10 _____



ತಾವು ಬರೆದ ಅದೇ ಪದಗಳನ್ನು ಅಧಿಕ ಸಂಖ್ಯೆಯಲ್ಲಿ ಬರೆದಿರುವರು ಯಾರು ಎಂಬುದನ್ನು ಗುಂಪಿನವರೊಂದಿಗೆ ಹೋಲಿಸಿ ನೋಡುವುದು.

ಅಧಿಕ ಪದಗಳನ್ನು ಒಂದೇ ರೀತಿ ಬರೆದ ಗೆಳೆಯರು : _____

ಒಂದೇ ರೀತಿ ಬರೆದ ಪದಗಳ ಸಂಖ್ಯೆ : _____

### 3. ಖಾಲಿ ಜಾಗ ತುಂಬಿರಿ

1. ಸಿಂಹವನ್ನು _____ ಎಂದು ಕರೆಯುತ್ತಾರೆ.

2. ಮರದಿಂದ ಮರಕ್ಕೆ ನೆಗೆಯುವ ಪ್ರಾಣಿ _____

3. ಆನೆಗೆ ಉದ್ದವಾದ _____ ಇರುತ್ತದೆ.



ಕೆರೆ ದಡ ಎಂದು ಹೇಳುವೆನು ಒಳಗೂ ಹೊರಗೂ ನೆಗೆಯುವೆನು
ಕೆರೆ ದಡ ಕೆರೆ ದಡ ನೆಗೆಯುವೆನು
ಸರಸರ ಎಂದು ಹೇಳುವೆನು
ಸರಸರನೆ ವೇಗವಾಗಿ ನಡೆಯುವೆನು
ಸರ ಸರ ನಡೆಯುವೆನು

## 4. ಸೂಕ್ತ ಪದಗಳನ್ನು ಆರಿಸಿ ಬರೆಯಿರಿ

(ಗೆರೆಗಳು, ಓಡುತ್ತದೆ, ಹಾಡುತ್ತದೆ, ಉದ್ದವಾಗಿದೆ, ನರ್ತಿಸುತ್ತದೆ)

1.  ಕತ್ತು _____

2.  ವೇಗವಾಗಿ _____

3.  ಮೈ ಮೇಲೆ _____ ಇವೆ.

4.  ನಲಿದು _____

5.  ಇಂಪಾಗಿ _____

## ಅ. ಓದಿ ಉತ್ತರ ಬರೆಯಿರಿ

### ಓದುವ ಹಲಗೆ

| | | | |
|---|---|---|---|
| ಮೃಗಾಲಯ | ತಿಂಡಿ | ಕಾಡಿನರಾಜ | ಚುರುಕು |
| ಅಮ್ಮ | ಹೊರಡೋಣ | ಸೊಂಡಿಲು | ಪ್ರವಾಸ |
| ಸಂತೋಷ | ಜನರು | ವಿಶ್ರಾಂತಿ | ಸಿಂಹ |
| ಸಿದ್ಧವಾಗು | ಪ್ರಾಣಿ | ಆಹಾರ | ಧನ್ಯವಾದ |

1. ಓದುವ ಹಲಗೆಯಲ್ಲಿರುವ ಎರಡು ಪದಗಳಿಗೆ ಅರ್ಥ ಬರೆಯಿರಿ.

_____, _____

2. ಐದು ಅಕ್ಷರಗಳಿರುವ ಪದವನ್ನು ಆರಿಸಿ ಬರೆಯಿರಿ.

_____, _____

ಪದಗಳನ್ನು ವೇಗವಾಗಿ ಓದುವೆನು, ಬಣ್ಣ ಹಚ್ಚುವೆನು.

## ಆ. ಮುಂದುವರೆದು ಬರೆಯಿರಿ



ಚಿಟ್ಟೆ ಚಿಟ್ಟೆ ಬಣ್ಣದ ಚಿಟ್ಟೆ

ಪಟ ಪಟ ಹಾರುವ ಅಂದದ ಚಿಟ್ಟೆ

_____

_____

_____

## ಇ. ಕೇಳಿ ಉತ್ತರ ಹೇಳಿ

**ಆತುರದ ಮೊಲ ಮತ್ತು ಅನುಭವಶಾಲಿ ಆನೆ**

ಒಂದು ಕಾಡಿನಲ್ಲಿ ಒಂದು ಅಹಂಕಾರಿ ಮೊಲವಿತ್ತು. ಅದಕ್ಕೆ ತಾನೇ ಅತಿಬುದ್ಧಿವಂತ ಮತ್ತು ವೇಗವಾಗಿ ಓಡುವೆ ಎನ್ನುವ ಗರ್ವವಿತ್ತು.

ಒಂದು ಸಲ ಕಾಡಿನಲ್ಲಿ ಕಾಡ್ಗಿಚ್ಚು ಹಬ್ಬಿತು. ಎಲ್ಲಾ ಪ್ರಾಣಿಗಳು ನೀರು ತರಲು ಹೊರಟವು. ಆಗ ಮೊಲ ತಾನು ಎಲ್ಲರಿಗಿಂತ ವೇಗವಾಗಿ ಓಡುತ್ತೇನೆ ಆದ್ದರಿಂದ ಬೆಂಕಿ ಆರಿಸಲು ಬೇಕಾದಷ್ಟು ನೀರನ್ನು ನಾನೇ ತರುತ್ತೇನೆ ಎಂದು ಅಹಂಕಾರದಿಂದ ಹೇಳಿತು. ಆದರೆ ಮೊಲದ ಬಾಯಿ ತುಂಬಾ ಸಣ್ಣ ಇದ್ದುದರಿಂದ ಸ್ವಲ್ಪವೇ ನೀರನ್ನು ತರಲು ಸಾಧ್ಯವಾಯಿತು. ಅಷ್ಟರಲ್ಲಿ ಬೆಂಕಿಯು ದೊಡ್ಡದಾಗಿ ಉರಿಯ ತೊಡಗಿತು.



ಇದನ್ನು ಕಂಡ ಆನೆಯು ಹೋಗಿ ತನ್ನ ಸೊಂಡಲಿನಿಂದ ಬಹಳಷ್ಟು ನೀರನ್ನು ತಂದು ಬೆಂಕಿ ಆರಿಸುವಲ್ಲಿ ಯಶಸ್ವಿಯಾಯಿತು. ಆಗ ಮೊಲವು ನಾಚಿಕೆಯಿಂದ ತಲೆತಗ್ಗಿಸಿ ಉಳಿದ ಪ್ರಾಣಿಗಳ ಬಳಿ ಕ್ಷಮೆ ಕೇಳಿತು ಹಾಗೂ ಎಲ್ಲರೊಂದಿಗೆ ಸ್ನೇಹದಿಂದ ಬಾಳಲು ಆರಂಭಿಸಿತು.

**ನೀತಿ :– ಒಗ್ಗಟ್ಟಿನಲ್ಲಿ ಬಲವಿದೆ ಆತುರಗಾರನಿಗೆ ಬುದ್ಧಿ ಮಟ್ಟ**

1. ಗರ್ವ ಪಡುತ್ತಿದ್ದ ಪ್ರಾಣಿ ಯಾವುದು?
2. ಎಲ್ಲಿಗೆ ಬೆಂಕಿ ಬಿದ್ದಿತು?
3. ಆನೆಯು ಯಾವ ರೀತಿ ಬೆಂಕಿಯನ್ನು ಆರಿಸಿತು?

## ಈ. ಮಾದರಿಯಂತೆ ಬರೆಯಿರಿ

ಮಾದರಿಯನ್ನು ಗಮನಿಸಿ ಕೆಳಗಿನ ಪದಗಳನ್ನು ಅವುಗಳ ಮುಂದೆ ನೀಡಿರುವ ಆಕಾರಗಳಲ್ಲಿ ಗೆರೆಗಳು ತಾಗುವಂತೆ ಬರೆಯಿರಿ.

1. ಅರಮನೆ ..... ಅರಮನೆ

2. ಉದ್ಯಾನವನ .....



3. ಸುಸ್ವಾಗತ .....



4. ಕಾಡಿನರಾಜ .....



## ಉ. ಪದಬಂಧ

**ಕೊಟ್ಟಿರುವ ಸೂಚನೆಗಳ ಸಹಾಯದಿಂದ ಪದ ಗೋಪುರವನ್ನು ಪೂರ್ಣಗೊಳಿಸಿ.**

1. ಊಟ ಮಾಡಲು ಬಳಸುವುದು
2. ಪಕ್ಷಿಯ ಮನೆ
3. ರಾತ್ರಿ ಆಕಾಶದಲ್ಲಿ ಫಳಫಳನೆ ಹೊಳೆಯುವುದು
4. ರಾಜನ ವಾಸ ಸ್ಥಳ
5. ಆಕಾಶದಲ್ಲಿ ಕಾಣುವ ಬಣ್ಣಗಳ ಕಮಾನು



ಊ. ಪ್ರಾಣಿಗಳ ಚಿತ್ರಗಳಿಗೆ ಅನುಗುಣವಾಗಿ ಅವುಗಳ ವಿಶೇಷತೆಯನ್ನು ಹೊಂದಿಸಿ ವಾಕ್ಯವನ್ನು ರಚಿಸಿ



| ಪ್ರಾಣಿಗಳು | ವಿಶೇಷತೆ | ವಾಕ್ಯ |
|---|---|---|
|  | ಉದ್ದ ಸೊಂಡಿಲು | = _____ |
|  | ಮರ ಹತ್ತುತ್ತದೆ | = _____ |
|  | ಜಿಗಿಯುತ್ತದೆ | = _____ |
|  | ಕಾಡಿನ ರಾಜ | = _____ |

ಋ. ಮಾತನಾಡೋಣ: ಬರೆಯೋಣ





ಚಿತ್ರಗಳಿಗೆ ತಕ್ಕಂತೆ ವಾಕ್ಯಗಳನ್ನು ಬರೆಯಿರಿ

_____

_____

_____

_____

_____

ಎ. ವಾಕ್ಯಕ್ಕೆ ಸರಿಹೊಂದುವ ಚಿತ್ರಗಳಿಗೆ ಗುರುತು ಹಾಕಿ ಅದರ ಹೆಸರನ್ನು ಬರೆಯಿರಿ

1. ಸ್ವಚ್ಛತೆಯಿಂದ ಇರುವ ಸ್ಥಳ





_____

2. ಸಾಲಾಗಿ ನಿಂತಿರುವ ಸ್ಥಳ






_____

3. ಪಾದರಕ್ಷೆಗಳನ್ನು ಸಾಲಾಗಿ ಬಿಟ್ಟಿರುವ ಸ್ಥಳ





_____

ಏಸುಳಿವು: ಕೊಡದಿಂದ ಸೂಕ್ತ ಪದಗಳನ್ನು ಆಯ್ದು ಕೊಟ್ಟಿರುವ ನಾಣ್ನುಡಿಗಳನ್ನು ಪೂರ್ಣಗೊಳಿಸಿ

1. ಶಕ್ತಿಗಿಂತ _____ , _____

2. ಕೈ ಕೆಸರಾದರೆ _____ , _____

3. ಕಷ್ಟ ಪಟ್ಟರೆ _____ , _____

4. ಅತಿಯಾಸೆ _____ , _____



## ಕಲಿಕಾ ಪಯಣ

### 1. ಕೆಳಗಿನ ಚಿತ್ರಗಳಿಗೆ ಬಣ್ಣ ಹಚ್ಚಿ ಪ್ರಾಣಿಯ ಹೆಸರನ್ನು ಬರೆಯಿರಿ





_____ _____

### 2. ಚಿತ್ರ ನೋಡಿ ಪದ ಬರೆಯಿರಿ



_____



_____



_____




_____

### 3. ದಿನ ಪತ್ರಿಕೆಯಲ್ಲಿ ದಪ್ಪ ಅಕ್ಷರದಲ್ಲಿ ಮುದ್ರಿತವಾಗಿರುವ ಪದಗಳನ್ನು ಕತ್ತರಿಸಿ ಅಂಟಿಸಿ

_____ _____

_____ _____

_____ _____

## ನಾನೇ ಓದುವೆ; ಬರೆಯುವೆ



ಗೆ ಕೆ ಖೆ ಮೆ ದೆ ವೆ ತೆ
ಟೆ ನೆ ರೆ ಮೆ ಸೆ ಫೆ ಹೆ
ಚೆ ಳೆ ಝೆ ಪೆ ಮೆ ಡೆ



| | | | |
|---|---|---|---|
| ಕೆರೆಗಳು | ನೆನಪು | ಕೆಣಕು | ಗೆರೆ |
| ಪೆನ್ಸಿಲ್ | ಮೆರವಣಿಗೆ | ತೆನೆ | ಸೆಣಬು |
| ಗೆಣಸು | ಚೆಲುವ | ಬೆನಕ | ಹೆದರಿಕೆ |
| ಬಳೆ | ಮೆಣಸು | ಸೆಳೆ | ಮಳೆ |

ಕೆನೆ
ಹಾಲಿನ ಕೆನೆ
ಬಿಳಿ ಹಾಲಿನ ಕೆನೆ



ತೆಪ್ಪ
ಬಿದಿರಿನ ತೆಪ್ಪ
ತೇಲುವ ಬಿದಿರಿನ ತೆಪ್ಪ

ಗೆಡ್ಡೆ ಗೆಣಸು
ನೆನಪಿನ ಅಂಗಳ
ಗೆರೆ ಹಾಕಿ ಚಿತ್ರ ಬರೆ
ಮದುವೆಯ ಮೆರವಣಿಗೆ



ಹಸಿರು ಮೆಣಸಿನಕಾಯಿ ಬಹಳ
ಕೆಂಪು ಮೆಣಸಿನಕಾಯಿಯನ್ನು
ಕೀಳು
ಹೆಸರುಕಾಳನ್ನು ಬೆರೆಸು





## ನಾನೇ ಓದುವೆ; ಬರೆಯುವೆ



ಬೇ ಧೇ ತೇ ಚೇ ವೇ ಪೇ ನೇ

ಜೇ ಣೇ ಕೇ ಯೇ ಗೇ ಢೇ ಟೇ

ಭೇ ಹೇ ಳೇ ಡೇ ರೇ ಶೇ ದೇ



| | | | |
|---|---|---|---|
| ಕೇಸರಿ | ಜೇಬು | ಮೇಜು | ಬೇರು |
| ತೇರು | ನೇಸರ | ಬೇವು | ಲೇಖನ |
| ದೇವರು | ಪೇಪರ್ | ಮೇಣದಬತ್ತಿ | ಪೇಟೆ |
| ಸೇವಂತಿ | ರೇಖಾಂಶ | ಬೇಡ | ಹೇರಳವಾದ |

ನೇಸರ

ಬಾನಿನಲ್ಲಿ ನೇಸರ

ಸುಂದರ ಬಾನಿನಲ್ಲಿ ನೇಸರ



ಮೇಣದಬತ್ತಿ

ಕರಗುವ ಮೇಣದಬತ್ತಿ

ಬೆಂಕಿಯಲ್ಲಿ ಕರಗುವ ಮೇಣದಬತ್ತಿ

ಪೇರಳೆ ಹಣ್ಣು

ಹಳದಿ ಸೇವಂತಿ ಹೂವು

ಬೇಸಿಗೆ ಬಿಸಿಲು

ನೇರವಾದ ರೇಖೆ





ಮೇಘನಾಳು ಮೇಜಿನ ಮೇಲೆ ಕುಳಿತಳು

ಲೇಖನ ರೇಖೆ ಬರೆದಳು

ಚೇತನಳು ಪೇಟೆಗೆ ಹೋದಳು

ಕೇಶವ ಕೇಸರಿಬಾತು ತಿಂದ



## ನನ್ನಿಂದ ಸಾಧ್ಯ

1. ಚೌಕದೊಳಗೆ ವೃತ್ತ ಹಾಕಿರುವ ಅಕ್ಷರಗಳನ್ನು ತೆಗೆದು ಒಂದು ಅರ್ಥಪೂರ್ಣವಾದ ಪದಗಳನ್ನು ರಚಿಸಿ

1. | ಡು | (ಗಿ) | ಗ |
2. | ಲು | (ಡ) | ಕ |
3. | ಳು | ಗ | (ದ) | ಪ |
4. | ನೆ | (ಲ್ಲಿ) | ಯ | ಮ |
5. | (ಕೆಂ) | ರೆ | ವ | ದಾ |
6. | (ಪು) | ಕೆಂ |
7. | ಡ | ಹ | (ಗು) |
8. | ಲಿ | (ಲಾ) |
9. | ರ | (ಬಿ) | ದಿ |



2. ಮ ಅಕ್ಷರದಿಂದ ಪ್ರಾರಂಭವಾಗುವ ಪದಗಳನ್ನು ಬರೆಯಿರಿ



ಘಟಕ 2

# 4. ಪ್ರಾಮಾಣಿಕ ವ್ಯಕ್ತಿ



ಒಂದು ಹಳ್ಳಿಯಲ್ಲಿ ರಂಗ ಎಂಬ ಬಡವನು ವಾಸಿಸುತ್ತಿದ್ದ. ಅವನು ಪ್ರತಿದಿನ ಕೂಲಿ ಕೆಲಸ ಮಾಡಿ ತನ್ನ ಕುಟುಂಬವನ್ನು ನಡೆಸುತ್ತಿದ್ದ.

ಒಂದು ದಿನ ಕೆಲಸ ಮುಗಿಸಿ ಮನೆಗೆ ಹೋಗುತ್ತಿದ್ದಾಗ ದಾರಿಯಲ್ಲಿ ಒಂದು ಕಂದು ಬಣ್ಣದ ಚೀಲ ನೋಡಿದ.

ಅಯ್ಯೋ, ಇಲ್ಲಿ ಒಂದು ಚೀಲ ಇದೆ ಇದನ್ನು ಯಾರೋ ಕಳೆದುಕೊಂಡಿರಬೇಕು ಎಂದು ಆ ಚೀಲವನ್ನು ತೆರೆದು ನೋಡಿದ. ಅದರ ತುಂಬಾ ಹಣ ಮತ್ತು ಕೆಲವು ಪತ್ರಗಳಿದ್ದವು.

ನಾನು ಬಡವನಾದರೂ ಇದು ನನ್ನ ಹಣವಲ್ಲ ಇದರ ಮಾಲೀಕನನ್ನು ಹುಡುಕಬೇಕು.

ರಂಗ ಊರಿನ ಜನರನ್ನು ಕೇಳಲು ಪ್ರಾರಂಭಿಸಿದ.

ರಂಗ : ಯಾರಾದರೂ ಹಣದ ಚೀಲ ಕಳೆದುಕೊಂಡಿದ್ದೀರಾ?

ಗ್ರಾಮಸ್ಥ : ಇಲ್ಲ ರಂಗ ನಾವು ಕಳೆದುಕೊಂಡಿಲ್ಲ. ಅಷ್ಟರಲ್ಲಿ ಒಬ್ಬ ವ್ಯಾಪಾರಿ ತುಂಬಾ ಚಿಂತೆಯಿಂದ ಅಲ್ಲಿಗೆ ಬಂದ.

ವ್ಯಾಪಾರಿ : ನನ್ನ ಹಣದ ಚೀಲ ಕಳೆದುಹೋಗಿದೆ ನಾನು ಏನು ಮಾಡಲಿ?





ರಂಗ : ನಿಮ್ಮ ಚೀಲದ ಬಣ್ಣ ಯಾವುದು? ಅದರೊಳಗೆ ಏನಿದೆ?

ವ್ಯಾಪಾರಿ :ನನ್ನದು ಕಂದು ಬಣ್ಣದ ಚೀಲವಾಗಿದ್ದು ಅದರಲ್ಲಿ ಹಣ ಮತ್ತು ಕೆಲವು ಪತ್ರಗಳಿವೆ. ರಂಗನಿಗೆ ಇದುವೆ ಚೀಲ ಎಂದು ತಿಳಿಯಿತು.

ರಂಗ : ಇದು ನಿಮ್ಮ ಚೀಲ ನನಗೆ ದಾರಿಯಲ್ಲಿ ಸಿಕ್ಕಿತು ತೆಗೆದುಕೊಳ್ಳಿ ಎಂದು ಕೊಟ್ಟನು.

ವ್ಯಾಪಾರಿ : ತುಂಬಾ ಧನ್ಯವಾದಗಳು, ನೀವು ಬಹಳ ಪ್ರಾಮಾಣಿಕರು.

ರಂಗ : ಇದು ನನ್ನ ಕರ್ತವ್ಯ.

ವ್ಯಾಪಾರಿ ಸಂತೋಷಪಟ್ಟು ರಂಗನಿಗೆ ಬಹುಮಾನ ನೀಡಿದ.

ವ್ಯಾಪಾರಿ : ನಿಮ್ಮ ಪ್ರಾಮಾಣಿಕತೆಗೆ ಈ ಸಣ್ಣ ಉಡುಗೊರೆ.

ರಂಗ : ಧನ್ಯವಾದಗಳು.

ರಂಗ ಸಂತೋಷದಿಂದ ಮನೆಗೆ ಹೋದ. ಅವನ ಪ್ರಾಮಾಣಿಕತೆಯನ್ನು ಊರಿನ ಜನರೆಲ್ಲ ಮೆಚ್ಚಿದರು.



## 1. ಪ್ರಶ್ನೆಗಳಿಗೆ ಉತ್ತರ ಬರೆಯಿರಿ

1. ರಂಗನು ಯಾವ ಕೆಲಸಕ್ಕೆ ಹೋಗುತ್ತಿದ್ದನು?

_____

2. ರಂಗನಿಗೆ ಏನು ಸಿಕ್ಕಿತು?

_____

3. ಅವನು ಹಣದ ಚೀಲವನ್ನು ಏಕೆ ಇಟ್ಟುಕೊಳ್ಳಲಿಲ್ಲ?

_____

4. ವ್ಯಾಪಾರಿ ರಂಗನಿಗೆ ಏನನ್ನು ಕೊಟ್ಟ?

_____

5. ಈ ಕಥೆಯಿಂದ ನೀವು ಏನು ಕಲಿತಿರಿ?

_____

## 2. ಸೂಕ್ತವಾದ ವಾಕ್ಯಕ್ಕೆ (✓) (✗) ಗುರುತು ಹಾಕಿ

1. ರಂಗನಿಗೆ ಸಿಕ್ಕಿದ್ದು ಕಂದು ಬಣ್ಣದ ಚೀಲ. ☐
2. ರಂಗನಿಗೆ ಸಿಕ್ಕಿದ್ದು ಕೆಂಪು ಬಣ್ಣದ ಚೀಲ. ☐
3. ರಂಗನು ಬಹಳ ಪ್ರಾಮಾಣಿಕ ವ್ಯಕ್ತಿ ☐
4. ರಂಗನ ತನಗೆ ಸಿಕ್ಕಿದ ಚೀಲವನ್ನು ಮನೆಗೆ ತೆಗೆದುಕೊಂಡು ಹೋದನು. ☐

## 3. ಸಮನಾರ್ಥಕ ಪದಗಳನ್ನು ಬರೆಯಿರಿ

1. ಕೆಲಸ ☐
2. ಪ್ರಾಮಾಣಿಕತೆ ☐
3. ಯೋಚನೆ ☐
4. ಬಹುಮಾನ ☐
5. ಧನ್ಯವಾದಗಳು ☐

## ಅಭ್ಯಾಸ



### ಅ. ಮಾದರಿಯಂತೆ ಓದಿ



ಶಿಕ್ಷಕರು ಪಾಠವನ್ನು ಓದುವುದನ್ನು ಕೇಳಿ, ಮಾದರಿಯಂತೆ ಓದೋಣ.

### ಆ. ಕಥೆಯಲ್ಲಿ ಇಷ್ಟವಾದ ಪದಗಳನ್ನು ಬರೆಯಿರಿ

1 _____ 5 _____

2 _____ 6 _____

3 _____ 7 _____

4 _____ 8 _____



ಒಬ್ಬರು ಬರದಿರುವ ಪದಗಳನ್ನೇ ಅಧಿಕ ಸಂಖ್ಯೆಯಲ್ಲಿ ಬರೆದಿರುವರು ಯಾರು ಎಂಬುದನ್ನು ಗುಂಪಿನವರೊಂದಿಗೆ ಹೋಲಿಸಿ ನೋಡುವುದು.

ಒಂದೇ ರೀತಿಯ ಪದಗಳನ್ನು ಅಧಿಕವಾಗಿ ಬರೆದ ಗೆಳೆಯರು : _____

ಒಂದೇ ರೀತಿ ಬರೆದ ಪದಗಳ ಸಂಖ್ಯೆ : _____

### ಇ. ಖಾಲಿ ಜಾಗ ತುಂಬಿ

1. ರಂಗನು ದಾರಿಯಲ್ಲಿ _____ ನೋಡಿದ.

2. ಚೀಲದಲ್ಲಿ _____ ಮತ್ತು _____ ಇದ್ದವು.

3. ವ್ಯಾಪಾರಿಯು ರಂಗನಿಗೆ _____ ನೀಡಿದನು.







ಗೂಡು ಗೂಡು ಗುಬ್ಬಚ್ಚಿ ಗೂಡು ಎಂದು ಹೇಳುವೆನು.
ಗುಬ್ಬಚ್ಚಿ ಹಾರುವಂತೆ ನಾನು ನಟಿಸುವೆನು.

## ಈ. ಮಾತನಾಡೋಣ

**ನನಗೆ ಇಷ್ಟವಾದ ಆಟ**



ನಿಮಗೆ ಇಷ್ಟವಾದ ಆಟಗಳ ಬಗ್ಗೆ ಶಿಕ್ಷಕರು ಮತ್ತು ಸ್ನೇಹಿತರ ಜೊತೆ ಮಾತನಾಡಿ.

## ಉ. ಓದಿ ಉತ್ತರ ಬರೆಯಿರಿ

### ಓದುವ ಹಲಗೆ

| | | | |
|---|---|---|---|
| ಹಳ್ಳಿ | ಹಣದ ಚೀಲ | ದಾರಿಯಲ್ಲಿ | ಉಡುಗೊರೆ |
| ಬಡವ | ಮಾಲೀಕ | ಧನ್ಯವಾದ | ಪ್ರಾಮಾಣಿಕತೆ |
| ಕೆಲಸ | ವ್ಯಾಪಾರಿ | ಕರ್ತವ್ಯ | ಸಂಪತ್ತು |
| ಮನೆ | ದಾಖಲೆ | ಬಹುಮಾನ | ಸಂತೋಷ |

1. ಓದುವ ಹಲಗೆಯಲ್ಲಿರುವ ನಾಲ್ಕು ಅಕ್ಷರದ ಪದಗಳನ್ನು ಆರಿಸಿ ಬರೆಯಿರಿ.

_____, _____, _____, _____

2. 'ಬಡವ' ಪದದ ವಿರುದ್ಧ ಪದ ಬರೆಯಿರಿ.

_____

3. 'ಸಂತೋಷ' ಪದದ ಸಮನಾರ್ಥಕ ಪದ ಬರೆಯಿರಿ.

_____

## ಊ. ಉಕ್ತ ಲೇಖನ

ಓದುವ ಹಲಗೆಯಲ್ಲಿರುವ ಪದಗಳನ್ನು ಕೇಳಿ ಬರೆಯಬೇಕು.

### ೩ು. ಚಿತ್ರಗಳ ಕೆಳಗಿನ ಪದಗಳಲ್ಲಿ ಗೆರೆ ಹಾಕಿರುವ ಅಕ್ಷರಗಳನ್ನು ಆರಿಸಿ ಪದವನ್ನು ರಚಿಸಿ

| | | | | |
|---|---|---|---|---|
|  |  |  |  |  |
| ಹಾರ | ಗಿಡುಗ | ಲಡ್ಡು | ಕಾಡು | ಷರಾಯಿ |

ಅಕ್ಷರಗಳನ್ನು ಜೋಡಿಸಿದರೆ ಸಿಗುವ ಪದ _____

### ಎ. ಪದ್ಯವನ್ನು ಓದಿ ಉತ್ತರ ಬರೆಯಿರಿ

ಚಿಟ್ಟೆ ಚಿಟ್ಟೆ
ಹಾರುವ ಚಿಟ್ಟೆ
ಬಣ್ಣವ ನಿನಗೆ ಕೊಟ್ಟವರಾರು?





ಗಿಳಿಯೇ ಗಿಳಿಯೇ
ಹಸಿರು ಗಿಳಿಯೇ
ಕೊಕ್ಕನು ನಿನಗೆ ಬರೆದವರಾರು?

ಜಿಂಕೆ ಜಿಂಕೆ
ಚುಕ್ಕಿಯ ಜಿಂಕೆ
ಚುಕ್ಕಿಯ ನಿನಗೆ ಇಟ್ಟವರಾರು?



1. ಗಿಳಿಯ ಬಣ್ಣ ಯಾವುದು?

_____

2. ಜಿಂಕೆಯ ಮೈ ಮೇಲೆ ಏನಿದೆ?

_____

3. ಚಿಟ್ಟೆ ಏನು ಮಾಡುತ್ತದೆ?

_____

## ಏ. ಯೋಚಿಸಿ ಉತ್ತರಿಸಿ



ಬೇಸಿಗೆಯ ದಿನ ಕೆಲವು ಮಕ್ಕಳು ಆಟವಾಡುತ್ತಿದ್ದರು. ಬಿಸಿಲು ಹೆಚ್ಚಾದಾಗ ಅವರು ದೊಡ್ಡ ಮರದ ಕೆಳಗೆ ಕುಳಿತರು. ಕೆಲವರು ಮಲಗಿ ವಿಶ್ರಾಂತಿ ಪಡೆದರು. ಮರದ ನೆರಳು ಅವರಿಗೆ ತಂಪನ್ನು ನೀಡಿತು.

**ಸರಿಯಾದ ಚಿತ್ರಗಳಿಗೆ (✓) ಗುರುತು ಹಾಕಿ**



☐



☐



☐

## ಐ. ಮೊದಲ ಅಕ್ಷರವನ್ನು ಬದಲಿಸಿ ಪಕ್ಷಿಯ ಮತ್ತು ವಸ್ತುಗಳ ಹೆಸರನ್ನು ಬರೆಯಿರಿ



ಹಾಡು ಹಾಡುವ ಚಂದ್ರಮೌಳಿ

ಮೊಟ್ಟೆ ಇಡುವುದು _____





ಆರೋಗ್ಯಕ್ಕೆ ಬೇಕು ಹಣ್ಣು

ನೋಡಲು ಬೇಕು _____





ಹಗಲಿನಲ್ಲಿ ತುಂಬಾ ಬಿಸಿಲು

ನೃತ್ಯ ಮಾಡುವುದು _____





ನೆರಳಿಗೆ ಬೇಕು ಮರ

ಕೊರಳಿಗೆ ಬೇಕು _____





ಮರದಲ್ಲಿ ಗಿಳಿ

ನೀರಿನಲ್ಲಿ _____



## ೬. ಚಿತ್ರವನ್ನು ಗಮನಿಸಿ ವಾಕ್ಯಗಳನ್ನು ರಚಿಸಿ





## ೭. ಚಿತ್ರ ನೋಡಿ ವಿರುದ್ಧ ಪದಗಳ ಹೆಸರನ್ನು ಹೊಂದಿಸಿ



× ಎಳು _____



× ಹೊರಗೆ _____



× ಮೃದು _____



× ಹಗಲು _____



× ಇಳಿಯುವುದು _____

## ಹಿಂತಿರುಗಿ ನೋಡೋಣ

ಚಿತ್ರ ನೋಡಿ ಗೆಳೆಯನ ಹತ್ತಿರ ಕಥೆ ಹೇಳಿ.



ಆವರಣದಲ್ಲಿರುವ ಸೂಕ್ತ ಪದಗಳನ್ನು ಆರಿಸಿ ಕೆಳಗಿನ ವಾಕ್ಯಗಳನ್ನು ಪೂರ್ತಿ ಮಾಡಿ




(ಮೋಡಗಳು, ಮಳೆ, ನದಿ, ಕಪ್ಪೆ, ಮರಗಳು, ಹೂವುಗಳು)

ಸುರಿಯುವ _____ ಸುಂದರ _____

ಬಿಳಿಯ _____ ಹಸಿರು _____

ಹರಿಯುವ _____ ಜಿಗಿಯುವ _____

## ಕೆಳಗಿನ ಜಾಹೀರಾತನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿ

**ಚಿತ್ರಕಥೆಯ ಪುಸ್ತಕಗಳ ಮೇಳ**

**ಚಿತ್ರಕಥೆಯ ಪುಸ್ತಕ ಮೇಳಕ್ಕೆ ಎಲ್ಲರಿಗೂ ಸ್ವಾಗತ!**

**ದಿನಾಂಕ:– 20/10/2026**

**ಸ್ಥಳ:** ನಗರ ಗ್ರಂಥಾಲಯ ತಾಳವಾಡಿ

**ಸಮಯ:** ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ

ಮಕ್ಕಳ ಪುಸ್ತಕಗಳಿಗೆ ವಿಶೇಷ ರಿಯಾಯಿತಿ

**ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ**

1. ಪುಸ್ತಕ ಮೇಳದ ದಿನಾಂಕ ಯಾವುದು? _____

2. ಪುಸ್ತಕ ಮೇಳ ನಡೆಯುವ ಸ್ಥಳ ಯಾವುದು? _____

3. ಯಾವ ಪುಸ್ತಕದ ಮೇಳ ನಡೆಯುತ್ತದೆ? _____

## ಚಿತ್ರವನ್ನು ಸೇರಿಸಿ ಓದಿ, ಪ್ರಶ್ನೆಗಳಿಗೆ ಉತ್ತರಿಸಿ

ಒಂದು  ನಲ್ಲಿ ಒಂದು ಚಿಕ್ಕ  ವಾಸಿಸುತ್ತಿತ್ತು. ಒಂದು ದಿನ ಅದು  ವನ್ನು ಕಂಡಿತು.  ಕಿತ್ತು ತಾನು ಮಾತ್ರ ತಿನ್ನದೆ ತನ್ನ ಸ್ನೇಹಿತರಾದ  ಜೊತೆ ತಿಂದಿತು.



**1. ಸರಿಯಾದ ಉತ್ತರಕ್ಕೆ (✓) ಗುರುತು ಹಾಕಿರಿ**

ಅಳಿಲು ಕಾಡಿನಲ್ಲಿ ವಾಸಿಸುತ್ತಿತ್ತು. ☐

ಅಳಿಲು ಹಳ್ಳಿಯಲ್ಲಿ ವಾಸಿಸುತ್ತಿತ್ತು. ☐

**2. ವಿರುದ್ಧ ಪದ ಬರೆಯಿರಿ**

| | | |
|---|---|---|
| ಬಂದವು | ಅ | |

## ಕಲಿಕಾ ಪಯಣ



**1. ನೀವು ಹೋಗಿರುವ ಪ್ರವಾಸ ಸ್ಥಳಗಳ ಬಗ್ಗೆ ಸ್ನೇಹಿತರೊಂದಿಗೆ ಚರ್ಚಿಸಿ ಬರೆಯಿರಿ**

**2. ಒಗಟುಗಳನ್ನು ಓದಿ ಚಿತ್ರಗಳನ್ನು ಹೊಂದಿಸಿ ಆನಂದಿಸಿ**

1. ಹಸಿರು ಗಿಡದಲ್ಲಿ ಮೊಸರು ಚೆಲ್ಲಿದೆ. –



2. ರಾತ್ರಿ ಬರುತ್ತೇನೆ, ಹಗಲು ಮರೆಯಾಗುತ್ತೇನೆ ನಾನು ಯಾರು? –



3 ಹುಲ್ಲು ತಿನ್ನುತ್ತೇನೆ ಹಾಲು ಕೊಡುತ್ತೇನೆ, ನಾನು ಯಾರು? –



**(ಚಂದಿರ, ಹಸು, ಮಲ್ಲಿಗೆ ಹೂವು)**



## ನಾನು ಕಲಿತದ್ದು



| | | | |
|---|---|---|---|
| 1. ಓದಿದ ಕಥೆಯನ್ನು ಹೇಳಲು ಬರುತ್ತದೆ. | ☐ | ☆ | ☆ ☆ |
| 2. ವಿರುದ್ಧ ಪದಗಳನ್ನು ಕಂಡು ಹಿಡಿಯುವೆ. | ☐ | ☆ | ☆ ☆ |
| 3. ಚಿತ್ರವನ್ನು ನೋಡಿ ಮಾತನಾಡಲು, ಬರೆಯಲು ಬರುತ್ತದೆ. | ☐ | ☆ | ☆ ☆ |

ಕಲಿತ ಸಾಮರ್ಥ್ಯಕ್ಕೆ ✓ ಗುರುತು ಹಾಕಬೇಕು. ಗಳಿಸಿದ ಸಾಮರ್ಥ್ಯಕ್ಕೆ ತಕ್ಕಂತೆ ಬಣ್ಣ ಹಚ್ಚಬೇಕು.



## ನಾನೇ ಓದುವೆ; ಬಣ್ಣ ಹಚ್ಚುವೆ



ತೈ ಖೈ ಕೈ ಗೈ ಳೈ ಶೈ ಣೈ
ಜೈ ಘೈ ಡೈ ಟೈ ವೈ ಧೈ ನೈ
ಸೈ ಲೈ ಬೈ ಢೈ ಚೈ ಮೈ ರೈ ಪೈ



| | | | |
|---|---|---|---|
| ಗೈರು ಹಾಜರಿ | ಮೈದಾನ | ಸೈನಿಕರು | ರೈತ |
| ಕೈಗಳು | ನೈದಿಲೆ | ಮೈನಾ | ಪೈಸೆ |
| ಶೈಲಿ | ಕೈಪಿಡಿ | ಚೈತನ್ಯ | ದೈತ್ಯ |
| ಸೈಕಲ್ | ವೈಶಾಖ ಮಾಸ | ಕೈಗಡಿಯಾರ | ಹೈನುಗಾರಿಕೆ |

ಪೈರು
ಹಚ್ಚ ಹಸುರಿನ ಪೈರು
ಗದ್ದೆಯಲ್ಲಿ ಹಚ್ಚಹಸುರಿನ ಪೈರು



ಮೈನಾ
ಸುಂದರ ಮೈನಾ
ಮರದ ಮೇಲೆ ಸುಂದರ ಮೈನಾ

ಅರಳಿದ ನೈದಿಲೆ
ರೈತನ ಶ್ರಮ
ವೈಶಾಖ ಮಾಸ
ಸೈನಿಕ ಪಡೆ



ವೈಸಿರಿಯು ರೈಲಿನ ಚಿತ್ರ ಬರೆದಳು
ಚೈತ್ರಾಳು ಶಾಲೆಗೆ ಗೈರು ಹಾಜರಾಗಿದ್ದಳು
ನೈದಿಲೆ ಹೂವು ಅರಳುತ್ತದೆ
ಮೈತ್ರಿಯು ಸೈಕಲ್ ಓಡಿಸಿದಳು





# ನನ್ನಿಂದ ಸಾಧ್ಯ!



ನಾನು ಪುಸ್ತಕವನ್ನು ಓದುತ್ತೇನೆ

ಆಟ ಆಡುತ್ತೇನೆ

ಕಥೆಯನ್ನು ಹೇಳುತ್ತಾರೆ

ಗುರು ಹಿರಿಯರನ್ನು ಗೌರವಿಸಬೇಕು

ಕೋಗಿಲೆ ಧ್ವನಿ ಇಂಪಾಗಿದೆ

ಸುಂದರ ಪ್ರವಾಸ ತಾಣಗಳು

ಮಧುಶ್ರೀ ಓದುತ್ತಿದ್ದಾಳೆ

ಪಕ್ಷಿಗಳೆಂದರೆ ಬಹಳ ಇಷ್ಟ

ಮಾನ್ಯ ಚಿತ್ರ ಬರೆಯುತ್ತಾಳೆ

ಸುಗ್ಗಿ ಕಾಲ ಬಂತು

ಏಣಿಯ ಮೇಲೆ ಏರಿದರು

ತೋಟಕ್ಕೆ ಹೋದರು

ಪುಸ್ತಕ ಭಂಡಾರ

ನೈದಿಲೆಯು ಅರಳುತ್ತದೆ

ಮಕ್ಕಳು ಆಟದ ಮೈದಾನದಲ್ಲಿ ಆಟವಾಡುತ್ತಾರೆ

ರವಿ ನೀರನ್ನು ಕುಡಿದನು

ಸೂಚನೆಗಳನ್ನು ಹೇಳುವೆ

ಪ್ರಾಣಿಗಳನ್ನು ಹಿಂಸಿಸಬಾರದು

ಸಾಲಾಗಿ ಬನ್ನಿರಿ



ನಿರಂತರವಾಗಿ ಎಷ್ಟು ವಾಕ್ಯಗಳನ್ನು ಓದಲು ಸಾಧ್ಯ?

ಎಂಬುದನ್ನು ಸ್ನೇಹಿತರೊಡನೆ ಸ್ಪರ್ಧೆ ನಡೆಸಿ ಓದಬಹುದು.

# ಎರಡನೇ ಅವಧಿಯ ಕಲಿಕಾ ಪಯಣದಲ್ಲಿ...



# Standard 3 - Kannada Reader - Term - I I

## Textbook Development Team


### Co-ordinator

**Dr. T. Jayagandhi ,**
Senior Lecturer,
SCERT, Chennai

### Subject Expert & Reviewer

**Dr. MUNIRAJA A.**
Assistant Professor
Department of Languages -Kannada
Madras Christian College, Tambaram,
Chennai - 600059

### Authors

**P. Siddaraju, SGT,**
PUPS, Byannapuram,
Talavadi, Erode

**G. Mamatha , SGT,**
PUMS, Talavadi,
Talavadi, Erode

**M. Sujatha, SGT,**
PUMS, Talavadi,
Talavadi, Erode

### Art and Design Team

**M. Amalraj,**
Layout Co-ordinator,
B.T. Asst., SCERT, Chennai.

**C. Prasanth,** Designer
**T.K. Poorna chandran,** Designer

### Illustration

**B. Pramoth,** Artist

### Wrapper Design

**Kathir Arumugam**



This book has been printed on 80 G.S.M.
Elegant Maplitho paper.
Printed by offset at: